## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570 006**


# ವಿವರಣಾ ಪುಸ್ತಕ

# 2018–19

## ಪಿಹೆಚ್.ಡಿ ಕಾರ್ಯಕ್ರಮ


**ವೆಬ್‌ಸೈಟ್: www.ksoumysore.karnataka.gov.in**

**ಇಪಿಎಬಿಎಕ್ಸ್ ಸಂಖ್ಯೆಗಳು : 0821–2519948, 2519941, 2519943, 2519952**

## ಗಮನಕ್ಕೆ

- ಅರ್ಜಿ ನಮೂನೆಗಳು ಮಾರಾಟಕ್ಕೆ ಲಭ್ಯವಿರುವುದಿಲ್ಲ.
- ಅರ್ಜಿ ನಮೂನೆ ಮತ್ತು ಚಲನ್‌ಗಳನ್ನು ಕ.ರಾ.ಮು.ವಿ. ಅಧಿಕೃತ ಜಾಲತಾಣದಿಂದ (website) ಡೌನ್‌ಲೋಡ್ ಮಾಡಿಕೊಳ್ಳಬೇಕು.
- ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯನ್ನು ಮಾತ್ರ ಸಂಪರ್ಕಿಸಬೇಕು.

| ಮುಖ್ಯ ದಿನಾಂಕಗಳು | |
|---|---|
| ದಂಡ ಶುಲ್ಕವಿಲ್ಲದೆ ಅರ್ಜಿಸಲ್ಲಿಕೆಗೆ ಕಡೆಯ ದಿನಾಂಕ | 31–05–2019 |
| ರೂ. 500/– ದಂಡ ಶುಲ್ಕದೊಂದಿಗೆ ಅರ್ಜಿಸಲ್ಲಿಕೆಗೆ ಕಡೆಯ ದಿನಾಂಕ | 15–06–2019 |
| ಸಾಮಾನ್ಯ ಪ್ರವೇಶಾತಿ ಪರೀಕ್ಷೆ | ಮುಂದೆ ತಿಳಿಸಲಾಗುವುದು |
| ಸಂದರ್ಶನ | ಮುಂದೆ ತಿಳಿಸಲಾಗುವುದು |

## ವಿಶೇಷ ಗಮನಕ್ಕೆ

- ಯುಜಿಸಿ ಸಾರ್ವಜನಿಕ ಪತ್ರ ಸಂಖ್ಯೆ F:No.2-1/2017(DEB-III) ದಿನಾಂಕ 14.09.2018 ಅನ್ವಯ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳು ಯು.ಜಿ.ಸಿ. ನಿಯಾಮವಳಿ 2016 ಹಾಗೂ ವಿವಿ ಅಧ್ಯಾದೇಶಗಳ ಅನ್ವಯ ಪಿಹೆಚ್.ಡಿ ಕಾರ್ಯಕ್ರಮ ನಡೆಸಬಹುದುದಾಗಿದೆ. ಇದಕ್ಕೆ ಪ್ರತ್ಯೇಕ ಮಾನ್ಯತೆಯ ಅಗತ್ಯವಿಲ್ಲ.
- ಕರ್ನಾಟಕ ಘನ ಉಚ್ಚನ್ಯಾಯಾಲಯವು ದಾವೆ ಸಂಖ್ಯೆ 34255/2016 (GM-RES) ರಂತೆ ನೀಡಿರುವ ತೀರ್ಪಿನಲ್ಲಿ, ಶಿಕ್ಷಣಕ್ರಮದ ಪದವಿಯು ಪ್ರವೇಶ ಪಡೆದ ವರ್ಷವನ್ನು ಆಧರಿಸಿ ಮಾನ್ಯತೆಗೊಳ್ಳುತ್ತದೆ ಹೊರತು ಪದವಿ ಪೂರ್ಣಗೊಳಿಸಿದ ದಿನಾಂಕವನ್ನು ಆಧರಿಸುವುದಿಲ್ಲ.
- ಯು.ಜಿ.ಸಿ. ನೀಡಿರುವ ಸಾರ್ವಜನಿಕ ಪ್ರಕಟಣೆ F.No. 1-9 (DEB-1) ದಿನಾಂಕ: 23–02–2018ರ ಅನ್ವಯ ದೂರ ಶಿಕ್ಷಣ ಕ್ರಮದ ಮೂಲಕ ನೀಡುವ ಎಲ್ಲಾ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳು, ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳಿಗೆ ಸಮಾನವಾಗಿರುತ್ತವೆ.
- ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುತ್ತದೆ. ಹೊರ ರಾಜ್ಯದ ಅಭ್ಯರ್ಥಿಗಳು ಶಿಕ್ಷಣಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ, ಅವರು ಕರ್ನಾಟಕ ರಾಜ್ಯದೊಳಗೆ ಕೇಂದ್ರಸ್ಥಾನದಲ್ಲಿ ಪ್ರವೇಶಾತಿಯನ್ನು ಪಡೆಯಬೇಕು.

## ಪರಿವಿಡಿ


| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| A | ಕುಲಪತಿಗಳ ಸಂದೇಶ | iv |
| B | ವಿಶ್ವವಿದ್ಯಾನಿಲಯವನ್ನು ಕುರಿತು | v |
| C | ವ್ಯವಸ್ಥಾಪನಾ ಮಂಡಳಿ | vi |
| D | ವಿಶ್ವವಿದ್ಯಾನಿಲಯದ ಅಧಿಕಾರಿಗಳು | vi |
| 01 | ಪಿಹೆಚ್.ಡಿ ಕಾರ್ಯಕ್ರಮಕ್ಕೆ ಸಂಬಂಧ ಪಟ್ಟ ನಿಯಮಾವಳಿಗಳು | 1 |
| 02 | ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು | 1 |
| 03 | ಸಂಶೋಧನಾ ಮಾರ್ಗದರ್ಶಕರ ವಿವರ | 2 |
| 04 | ಪ್ರವೇಶಾತಿಗೆ ಸಂಬಂಧಿಸಿದ ಮುಖ್ಯ ಸೂಚನೆಗಳು | 5 |
| 05 | ಪ್ರವೇಶಾತಿ ಶುಲ್ಕ ಸಂರಚನೆ | 6 |
| 06 | ಪಿಹೆಚ್.ಡಿ ಕಾರ್ಯಕ್ರಮ | 8 |
| 07 | ನೋಂದಣಿಗೆ ಮೊದಲಿನ ಪ್ರಮುಖ ಹಂತಗಳು | 9 |
| 08 | ನೋಂದಣಿ ನಂತರದ ಪ್ರಮುಖ ಹಂತಗಳು | 13 |
| 09 | ತಾತ್ಕಾಲಿಕ ಶೈಕ್ಷಣಿಕ ಯೋಜನೆ | 17 |
| 10 | ವಿದ್ಯಾರ್ಥಿ ಬೆಂಬಲ ಸೇವೆಗಳು | 17 |
| 11 | ಘಟಿಕೋತ್ಸವ | 19 |
| 12 | ಗುಣಾತ್ಮಕ ಕ್ರಮಗಳು | 20 |
| 13 | ಮಾಹಿತಿ ಮತ್ತು ಮಾರ್ಗದರ್ಶನ ಘಟಕ | 20 |
| 14 | ಕುಂದುಕೊರತೆ ನಿವಾರಣಾ ಘಟಕ | 21 |
| | ಅನುಬಂಧ | |
| I | ಅರ್ಜಿ ನಮೂನೆ B | 22 |
| II | ಅರ್ಜಿ ನಮೂನೆ C | 24 |
| III | ಪ್ರಗತಿ ವರದಿ ನಮೂನೆ | 25 |

## ಕುಲಪತಿಗಳ ಸಂದೇಶ



ಪ್ರಿಯ ಕಲಿಕಾರ್ಥಿ,

ಕರಾಮುವಿ ಕುಟುಂಬವು, ಶೈಕ್ಷಣಿಕ ಸಂಶೋಧನೆಯನ್ನು ಸಾಧಿಸಲು ಮಾತ್ರವಲ್ಲದೆ ನಿಮ್ಮ ವೃತ್ತಿ ಜೀವನದ ಆಶಯವನ್ನು ಪೂರೈಸಿಕೊಳ್ಳಲು ನೀವು ಆಯ್ಕೆ ಮಾಡಿಕೊಂಡಿರುವ ಶೈಕ್ಷಣಿಕ ಕಾರ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸುತ್ತದೆ. ರಾಜ್ಯ ಶಾಸನಸಭೆಯ ಅಧಿನಿಯಮದಿಂದ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾನಿಲಯವು ಅದ್ಭುತ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸಿದೆ. ವಿಶ್ವವಿದ್ಯಾನಿಲಯವು ನೀಡುತ್ತಿರುವ ಶಿಕ್ಷಣಕ್ರಮಗಳು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಮಾನ್ಯ ಮಾಡಲ್ಪಟ್ಟಿವೆ. ಆದುದರಿಂದ ವಿಶ್ವವಿದ್ಯಾನಿಲಯದ ಪದವಿಗಳನ್ನು ದೇಶದ್ಯಾಂತ ಉದ್ಯೋಗ ಅವಕಾಶಗಳಿಗೆ ಮಾನ್ಯತೆ ಮಾಡಲಾಗುತ್ತದೆ.

ವಿಶ್ವವಿದ್ಯಾನಿಲಯದ ಮೂಲ ಮೌಲ್ಯಗಳನ್ನು ಅದರ ದೃಷ್ಟಿಯಾದ ***'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'*** ಯಿಂದ ಪಡೆದುಕೊಳ್ಳಲಾಗಿದೆ. ಗುಣಮಟ್ಟದಿಂದ ಕೂಡಿದ ಉನ್ನತ ಶಿಕ್ಷಣವು ವಿಶ್ವವಿದ್ಯಾನಿಲಯದ ಗುರಿಯಾಗಿದೆ. ದೇಶದ ಉದಯೋನ್ಮುಖ ಅಗತ್ಯೆಗಳಿಗೆ ಸ್ಪಂದಿಸುವ ಕವಲುದಾರಿಯಲ್ಲಿ ಇಂದು ಉನ್ನತ ಶಿಕ್ಷಣ ನಿಂತಿದೆ.

ನಿಮಗೆ ತಿಳಿದಿರುವಂತೆ ಉನ್ನತ ಶಿಕ್ಷಣ ಸಂಸ್ಥೆಗಳು ನಿಯಮಿತ ಭೋದನೆಯ ಜೊತೆಗೆ ಸಂಶೋಧನೆ ಮತ್ತು ಅಭಿವೃದ್ದಿಗೂ ಒತ್ತು ಕೊಡುತ್ತವೆ. ಆಬಿವೃದ್ಧಿ ಹೊಂದುತ್ತಿರುವ ದೇಶವಾದ ಭಾರತವು ಸರಿಯಾದ ಸಂಶೋಧನೆ ಮತ್ತು ಅಭಿವೃದ್ದಿಯ ಮೂಲಕ ಅದ್ಭುತ ಬೆಳವಣಿಗೆ ಸಾಧಿಸಬಹುದು. ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರು ವಿವಿಧ ವಿಷಯಗಳಲ್ಲಿ ಸಂಶೋಧನೆ ಮಾಡುವ ಮೂಲಕ ಮಾನವರು ಉನ್ನತಿ ಹೊಂದುವರು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸಂಶೋಧನಾ ಅಸಕ್ತರನ್ನು ಉತ್ತೇಜಿಸಲು ಪಿಹೆಚ್.ಡಿ ಪದವಿಗಾಗಿ ಸಂಶೋಧನಾ ಕಾರ್ಯಕ್ರಮವನ್ನು ಅರಂಭಿಸಿದೆ.

ವಿಶ್ವವಿದ್ಯಾನಿಲಯವು ಅತ್ಯುತ್ತಮ ತಂತ್ರಜ್ಞಾನ ಮತ್ತು ಪರಿಣತರನ್ನು ಹೊಂದಿದೆ. ವಿವಿಧ ವಿಭಾಗಗಳಿಂದ ನೀಡುತ್ತಿರುವ ಸಂಶೋಧನಾ ಕಾರ್ಯಕ್ರಮವು ಗುಣಮಟ್ಟದ ಸಂಶೋಧನೆಗೆ ದಾರಿ ಮಾಡಿಕೊಡುವುದಲ್ಲದೇ ಇವು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳ ಸಂಶೋಧನಾ ಕಾರ್ಯಕ್ರಮಕ್ಕೆ ಸಮಾನವಾಗಿದೆ.

ವಿಶ್ವವಿದ್ಯಾನಿಲಯವು ತನ್ನ ಕೇಂದ್ರಸ್ಥಾನ ಮೂಲಕ ನೀಡುವ ಸೇವೆಗಳನ್ನು ಪಡೆದು ನೀವು ಒಳ್ಳೆಯ ಅನುಭವವನ್ನು ಹೊಂದುವಿರೆಂಬ ಭರವಸೆ ನನ್ನದಾಗಿದೆ. ನಿಮ್ಮ ಶೈಕ್ಷಣಿಕ ಪ್ರಯತ್ನಗಳಿಗೆ ಶುಭವಾಗಲೆಂದು ನಾನು ಹಾರೈಸುತ್ತೇನೆ.

**ಪ್ರೊ. ಡಿ. ಶಿವಲಿಂಗಯ್ಯ**

## ವಿಶ್ವವಿದ್ಯಾನಿಲಯವನ್ನು ಕುರಿತು

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ (ಮುಕ್ತ ಮತ್ತು ದೂರ ಕಲಿಕೆ) ನಿಯಾಮಾವಳಿ 2017ರನ್ವಯ ಮಾನ್ಯತೆ ಪಡೆದಿದೆ.**

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ** ಎಂಬ ಧ್ಯೇಯ ವಾಕ್ಯದೊಂದಿಗೆ ವಿಶ್ವವಿದ್ಯಾನಿಲಯವು 1996ರ ಜೂನ್‌ನಲ್ಲಿ ಸ್ಥಾಪಿತಗೊಂಡಿದೆ. ಜಾಗತೀಕರಣದ ಯುಗದಲ್ಲಿ ರಾಷ್ಟ್ರವು ಸಾಂಪ್ರದಾಯಿಕ ಅರ್ಥ ವ್ಯವಸ್ಥೆಯಿಂದ ಜಾಗತೀಕರಣದ ಮುಕ್ತ ಆರ್ಥಿಕ ವ್ಯವಸ್ಥೆಗೆ ಬದಲಾದ ಕಾರಣ ಇಂದು ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಂಡಿದೆ. ಈ ಸಂಕ್ರಮಣ ಸ್ಥಿತಿಯಿಂದಾಗಿ ಪ್ರಸ್ತುತ ಜ್ಞಾನವು ಕೇವಲ ತಥ್ಯಗಳ ಸಂಗ್ರಹಣೆಗಿಂತ ಆನ್ವಯಿಕೆಗೆ ಹೆಚ್ಚು ಮಹತ್ವ ಒದಗಿಸಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸರ್ವಾಂಗೀಣ ಮಾನವ ವ್ಯಕ್ತಿತ್ವ ಅಭಿವೃದ್ಧಿಯ ಉದ್ದೇಶದಿಂದ ಪ್ರಸ್ತುತ ಜಾಗತಿಕ ಪರಿಸರಕ್ಕೆ ಹೊಂದಿಕೊಳ್ಳಲು ಜ್ಞಾನದ ಹಂಚಿಕೆಗಾಗಿ ಅಂತರ್ ಶಿಸ್ತೀಯ ಮಾರ್ಗವನ್ನು ಸಂಯೋಜಿಸಲು ಪ್ರಯತ್ನಿಸುತ್ತದೆ.

ಮೈಸೂರು ಶ್ರೀಮಂತ ಸಾಂಪ್ರದಾಯಿಕ ಪರಂಪರೆಯ ಐತಿಹಾಸಿಕ ಕೇಂದ್ರವಾಗಿದ್ದು, ವಿವಿಧ ಸಾಮ್ರಾಜ್ಯಗಳಲ್ಲಿ ಸಂಭವಿಸಿದ ಮಹತ್ವ ಪೂರ್ಣ ಐತಿಹಾಸಿಕ ಘಟನೆಗಳು ಹಾಗೂ ಇಲ್ಲಿನ ಮಾನವ ಸಾಮಾಜಿಕ ವ್ಯವಸ್ಥೆಯು ಅನುಪಮವಾಗಿದೆ. ಮಾನವ ಕಲ್ಯಾಣದ ಹಾದಿಯಲ್ಲಿ ಅಂತರಾಷ್ಟ್ರೀಯ ಮಟ್ಟದ ಧ್ಯೇಯೋದ್ದೇಶಗಳನ್ನು ಸಾಧಿಸಲು ವಿಶ್ವವಿದ್ಯಾನಿಲಯವು ಮಾರ್ಗವನ್ನು ತೆರೆದಿದೆ. ಉನ್ನತ ಶಿಕ್ಷಣದ ಸಾವಿರಾರು ಯುವ ಆಕಾಂಕ್ಷಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು 1996ರಲ್ಲಿ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

ವಿಶ್ವವು ಬಹುದೊಡ್ಡ ಸವಾಲಿನೊಂದಿಗೆ 21ನೇ ಶತಮಾನವನ್ನು ಪ್ರವೇಶಿಸಿದೆ. ಪ್ರಪಂಚದ ಯಾವ ದೇಶವು ಈ ಸವಾಲಿಗೆ ಹೊರತಾಗಿಲ್ಲ. ಜಾಗತೀಕರಣದ ಪರಿಣಾಮವಾಗಿ ಜ್ಞಾನದ ಕ್ರಾಂತಿ ಹಾಗೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಿ ಉಳಿವಿಗಾಗಿ ಸ್ಪರ್ಧೆಗೆ ಕಾರಣವಾಗಿದೆ. ಬದಲಾಗುತ್ತಿರುವ ಪ್ರಪಂಚದಲ್ಲಿ ಶಿಕ್ಷಣ ತಜ್ಞರು ಹಾಗೂ ಶಿಕ್ಷಣ ಯೋಜಕರನ್ನು ವಿಶ್ವವಿದ್ಯಾನಿಲಯದ ಪಾತ್ರವನ್ನು ಪುನರ್‌ವ್ಯಾಖ್ಯಾನಿಸುವಂತೆ ಮಾಡಿದೆ. ಜ್ಞಾನ ಭಂಡಾರವನ್ನು ನಿರ್ಮಿಸಲು ಶೈಕ್ಷಣಿಕ ಜ್ಞಾನವನ್ನು ಹೊಸ ಚಿಂತನೆ, ಹೊಸ ಮಾರ್ಗ, ಹೊಸ ಪರಿಕಲ್ಪನೆಯ ಜೊತೆ ಸಂಯೋಜನೆಗೊಳಿಸಿ ಅರೆಕುಶಲ ಹಾಗೂ ಕುಶಲ ರಹಿತ ಮಾನವ ಸಂಪನ್ಮೂಲವನ್ನು ವೃತ್ತಿಪರ ಕುಶಲ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಬಹುದಾಗಿದೆ.

### ವಿಶಿಷ್ಟ ಲಕ್ಷಣಗಳು

ಮುಕ್ತ ಮತ್ತು ದೂರ ಕಲಿಕಾ ವ್ಯವಸ್ಥೆಯು ಅದ್ವಿತೀಯವು ಹಾಗೂ ಸವಾಲುವುಳ್ಳದ್ದು ಅಗಿದೆ. ಏಕೆಂದರೆ ಮುಕ್ತ ಮತ್ತು ದೂರ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗುವ ಕಲಿಕಾರ್ಥಿಗಳು ವಿವಿಧ ಬಗೆಯ ಸಾಮಾಜಿಕ, ಆರ್ಥಿಕ ಹಿನ್ನೆಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನೆಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಇಂತಹ ವಿದ್ಯಾರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ವಿದ್ಯಾರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಈ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಇದಕ್ಕಾಗಿಯೇ ಈ ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿದೆ. ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

1) ವಿವಿಧ ಕ್ರಮಗಳ ಮುಖಾಂತರ ಮಾರ್ಗದರ್ಶಕ ದೃಷ್ಟಿಕೋನವನ್ನು ಕಾರ್ಯಾತ್ಮಕ ಯೋಜನೆಯಾಗಿ ಪರಿವರ್ತಿಸುವುದು.
2) ಕೌಶಲ ತರಬೇತಿ ಮುಖಾಂತರ ಉತ್ಕೃಷ್ಟ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದು.
3) ಶಿಕ್ಷಣವನ್ನು ಪೂರೈಸದೇ ಅರ್ಧದಲ್ಲಿ ಬಿಟ್ಟಿರುವ ಕಲಿಕಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಅವಕಾಶವನ್ನು ಒದಗಿಸುವುದು.
4) ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಜ್ಞಾನವನ್ನು ಗಳಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು.
5) ಅಭ್ಯರ್ಥಿಗಳಿಗೆ ತಾವು ವಾಸಿಸುವ ಸ್ಥಳದಲ್ಲೇ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸುವುದು.
6) ಪಾರದರ್ಶಕವಾಗಿ ಪ್ರವೇಶವನ್ನು ಕಲ್ಪಿಸುವುದು.
7) ನಿರ್ಬಂದಿತ ಕಲಿಕೆಯನ್ನು ಜಾಗತಿಕ ಆಧಾರಿತ ಕಲಿಕೆಗೆ ವರ್ಗಾಯಿಸುವುದು.
8) ಉನ್ನತ ಶಿಕ್ಷಣಕ್ಕೆ ನವೀನ ಪರಿಕಲ್ಪನೆ ಹಾಗೂ ಹೊಸ ಮಾರ್ಗವನ್ನು ಒದಗಿಸುವುದು.
9) ರಾಷ್ಟ್ರದ ಬೆಳವಣಿಗೆ ಸಾಧಿಸಲು ವಿವಿಧ ಉದ್ದೇಶದ ಅಂಶಗಳನ್ನು ಒದಗಿಸುವುದು.
10) ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸುವ ವಿಮರ್ಶಾತ್ಮಕ ಪಾತ್ರ ವಹಿಸುವುದು.
11) ಆಂತರಿಕ ಸಾಮರ್ಥ್ಯ ಬೆಳೆಸಿಕೊಳ್ಳುವಲ್ಲಿ ವಿದ್ಯಾರ್ಥಿಗೆ ಅವಶ್ಯಕ ಬೆಂಬಲ ಸೇವೆಗಳನ್ನು ಸೃಷ್ಟಿಸುವುದು.

## ವ್ಯವಸ್ಥಾಪನಾ ಮಂಡಳಿ

| | | |
|---|---|---|
| 1. | ಕುಲಪತಿ, ಕರಾಮುವಿ | ಅಧ್ಯಕ್ಷರು |
| 2. | ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಕುಲಪತಿ, (ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸರದಿಯ ಮೂಲಕ ನಾಮ ನಿರ್ದೇಶಿತರಾದ ಕರ್ನಾಟಕ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳ ಒಬ್ಬರು ಕುಲಪತಿ) | ಸದಸ್ಯರು |
| 5. | ಡೀನ್ (ಶೈಕ್ಷಣಿಕ), ಕರಾಮುವಿ | ಸದಸ್ಯರು |
| 6. | ಸಮಾಕುಲಾಧಿಪತಿಗಳಿಂದ ನಾಮ ನಿರ್ದೇಶಿತರಾಗುವ ಶೈಕ್ಷಣಿಕ, ವೈಜ್ಞಾನಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿನ ಐವರು ಗಣ್ಯ ವ್ಯಕ್ತಿಗಳು | ಸದಸ್ಯರುಗಳು |
| 7. | ಕರ್ನಾಟಕ ವಿಧಾನಸಭಾ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು | ಸದಸ್ಯರುಗಳು |
| 8. | ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು | ಸದಸ್ಯರುಗಳು |
| 9. | ಕುಲಸಚಿವರು, ಕರಾಮುವಿ | ಕಾರ್ಯದರ್ಶಿ |

## ವಿಶ್ವವಿದ್ಯಾನಿಲಯದ ಅಧಿಕಾರಿಗಳು

**ಗೌರವಾನ್ವಿತ ಶ್ರೀ ವಾಜೂಬಾಯಿ ವಾಲಾ**
**ಕುಲಾಧಿಪತಿಗಳು**
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

⇩

**ಗೌರವಾನ್ವಿತ ಶ್ರೀ ಜಿ.ಟಿ. ದೇವೇಗೌಡ**
**ಸಮಕುಲಾಧಿಪತಿಗಳು**
ಗೌರವಾನ್ವಿತ ಉನ್ನತ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ

⇩

**ಗೌರವಾನ್ವಿತ ಪ್ರೊ॥ ಡಿ. ಶಿವಲಿಂಗಯ್ಯ**
**ಕುಲಪತಿ**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

⇩

**ಪ್ರೊ॥ ಬಿ. ರಮೇಶ್**
**ಕುಲಸಚಿವ**

⇩

| ಪ್ರೊ॥ ಜಗದೀಶ | ಡಾ॥ ಎ. ಖಾದರ್ ಪಾಷಾ | ಡಾ॥ ಎಂ.ಎಸ್. ರಮಾನಂದ | ಡಾ॥ ಡಿ.ಟಿ. ಬಸವರಾಜ್ |
|---|---|---|---|
| **ಡೀನ್ (ಶೈಕ್ಷಣಿಕ)** | **ಹಣಕಾಸು ಅಧಿಕಾರಿ** | **ಕುಲಸಚಿವರು (ಪರೀಕ್ಷಾಂಗ)** | **ಡೀನ್ (ಅಧ್ಯಯನ ಕೇಂದ್ರಗಳು)** |

## 1. ಪಿಹೆಚ್.ಡಿ ಕಾರ್ಯಕ್ರಮಕ್ಕೆ ಸಂಬಂಧ ಪಟ್ಟ ನಿಯಮಾವಳಿಗಳು

**ಅ. ಮುಕ್ತ ವಿಶ್ವವಿದ್ಯಾನಿಲಯಗಳಿಗಾಗಿ ಯುಜಿಸಿಯ ನಿಯಮಾವಳಿಗಳು**

ಭಾರತ ಸರ್ಕಾರದ ಅಧಿಕೃತ ರಾಜ್ಯಪತ್ರ ದಿನಾಂಕ: 23–06–2017ರಂದರ ಮೂಲಕ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಮುಕ್ತ ಮತ್ತು ದೂರ ಕಲಿಕೆಗೆ ಸಂಬಂಧಿಸಿದಂತೆ ಕ್ಲಾಸ್ (ಜೆ)ಯ ಸೆಕ್ಷನ್ 12(5) ನ್ನು ಒದಿಕೊಂಡಂತೆ ಸೆಕ್ಷನ್ 26 (1)ರ ಅನ್ವಯ (ODL) ನಿಯಾಮಾವಳಿಗಳನ್ನು ಪ್ರಕಟಿಸಿದೆ. ಮುಕ್ತ ಮತ್ತು ದೂರ ಶಿಕ್ಷಣವನ್ನು ನೀಡುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಈ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯಿಂದ ಮಾನ್ಯತೆಯನ್ನು ಹೊಂದಿದ್ದು, ಈ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುತ್ತಿದೆ.

**ಆ. ಯುಜಿಸಿಯ ಪಿಹೆಚ್.ಡಿ ನಿಯಮಾವಳಿಗಳು 2016**

ವಿಶ್ವವಿದ್ಯಾನಿಲಯ ಧನ ಸಹಾಯ ಅಯೋಗವು 05 ಮೇ 2016ರಂದು (ಪಿಹೆಚ್.ಡಿ/ಎಂ.ಫಿಲ್ ಪದವಿಗಳ ಪ್ರದಾನ ಮಾಡಲು ಕನಿಷ್ಠ ಗುಣಮಟ್ಟ ಮತ್ತು ವಿಧಾನ) ನಿಯಮಾವಳಿ– 2016 ಗಳನ್ನು ಪ್ರಕಟಿಸಿದೆ. ಇದು ಜುಲೈ 2009ರ ಹಿಂದಿನ (ಪಿಹೆಚ್.ಡಿ/ಎಂ.ಫಿಲ್ ಪದವಿಗಳ ಪ್ರದಾನ ಮಾಡಲು ಕನಿಷ್ಠ ಗುಣಮಟ್ಟ ಮತ್ತು ವಿಧಾನ) ನಿಯಮಾವಳಿ– 2009 ನ್ನು ಅನೂರ್ಜಿತಗೊಳಿಸಿದೆ.

**ಇ. ಕರಾಮುವಿ ಪಿಹೆಚ್.ಡಿ ಅಧ್ಯಾದೇಶ ( Degree of Doctor of Philosophy) 2018**

ಕರಾಮುವಿಯು 2012 ರಲ್ಲಿ ಮೊದಲ ಪಿಹೆಚ್.ಡಿ ಅಧ್ಯಾದೇಶ (Degree of Doctor of Philosophy 2012)ವನ್ನು ಹೊರಡಿಸಿತ್ತು. ಇದು 2018 ರಲ್ಲಿ ಯುಜಿಸಿಯ ಪಿಹೆಚ್.ಡಿ ನಿಯಮಾವಳಿಗಳು 2016 ಗಳನ್ನೊಳಗೊಂಡಂತೆ ತಿದ್ದುಪಡಿ ಮಾಡಲ್ಪಟ್ಟಿದೆ. ಇದರಲ್ಲಿ ಶೈಕ್ಷಣಿಕ ಅರ್ಹತೆ, ಸಾಮಾನ್ಯ ಪ್ರವೇಶ ಪರೀಕ್ಷೆ, ನೋಂದಣಿ, ಸಂಶೋಧನಾ ಪ್ರಗತಿ, ಸಲ್ಲಿಕೆ, ಪರೀಕ್ಷಕ ಮತ್ತು ಪದವಿ ಪ್ರದಾನವನ್ನು ಯುಜಿಸಿ ನಿಯಾಮಾವಳಿಗಳು 2016ರ ಅನುಸಾರ ವಿನ್ಯಾಸಗೊಳಿಸಲ್ಪಟ್ಟಿದೆ.

## 2. ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು

| ಕ್ರ..ಸಂ. | ನಾಮಕರಣ |
|---|---|
| 1 | ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 2 | ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 3 | ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 4 | ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 5 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಸಂಶೋಧನಾ ವಿಭಾಗ |
| 6 | ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 7 | ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 8 | ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 9 | ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 10 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 11 | ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 12 | ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |

| | |
|---|---|
| 13 | ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 14 | ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 15 | ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 16 | ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 17 | ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ |
| 18 | ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 19 | ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 20 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 21 | ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |

## 3. ಸಂಶೋಧನಾ ಮಾರ್ಗದರ್ಶಕರ ವಿವರ

| ಕ್ರ. ಸಂ. | ಅಧ್ಯಾಪಕರ ಹೆಸರು | ಹುದ್ದೆ | ವಿದ್ಯಾರ್ಹತೆ | ವಿಶೇಷ ತಜ್ಞತೆ | ಸೇವಾನುಭವ ವರ್ಷಗಳಲ್ಲಿ | ದೂರವಾಣಿ ಸಂಖ್ಯೆ |
|---|---|---|---|---|---|---|
| **ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | | | | | | |
| 01. | ಡಾ. ಎ. ರಂಗಸ್ವಾಮಿ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಆಧುನಿಕ ಸಾಹಿತ್ಯ | 24 | 9448166815 |
| 02. | ಡಾ. ಡಿ. ನಾಗಣ್ಣ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಾಹಿತ್ಯ ವಿಮರ್ಶೆ | 24 | 9738979269 |
| 03. | ಡಾ. ಕವಿತಾ ರೈ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಕಾವ್ಯ ಮೀಮಾಂಸೆ | 6 | 9482206129 |
| 04. | ಡಾ. ಟಿ.ಎಂ. ಗೀತಾಂಜಲಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ತೌಲನಿಕ ಸಾಹಿತ್ಯ | 24 | 9739425639 |
| 05. | ಡಾ. ಎನ್.ಆರ್. ಚಂದ್ರೇಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಜನಪದ ಮತ್ತು ವಿಮರ್ಶೆ | 6 | 9449668997 |
| 06. | ಡಾ. ಪಿ. ಮಣಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಭಾಷಾ ಸಾಹಿತ್ಯ | 6 | 9480170799 |
| **ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | | | | | | |
| 07. | ಡಾ. ಜಿ. ನಟರಾಜು | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಬ್ರಿಟಿಷ್ ಸಾಹಿತ್ಯ | 6 | 9741219820 |
| **ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | | | | | | |
| 08. | ಡಾ. ಕಾಂಬ್ಳೆ ಅಶೋಕ್ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ವ್ಯಾಕರಣ ಶಾಸ್ತ್ರ | 25 | 9449638999 |
| 09. | ಡಾ. ಪ್ರಭುಸೇನ ಡಿ. | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಪದ್ಯ ಸಾಹಿತ್ಯ | 6 | 9945653167 |
| **ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | | | | | | |
| 10. | ಡಾ. ವಿ.ಎಂ. ರಮೇಶ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಕರ್ನಾಟಕ ಇತಿಹಾಸ | 6 | 9880903740 |

| | | | | | | |
|---|---|---|---|---|---|---|
| ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ. | | | | | | |
| 11. | ಡಾ. ಶೆಲ್ವಪಿಳ್ಳೈ ಅಯ್ಯಂಗಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಪ್ರಾಚೀನ ಇತಿಹಾಸ | 12 | 9686215043 |
| ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 12. | ಡಾ. ಎಂ.ಎಸ್. ರಮಾನಂದ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಸೂಕ್ಷ್ಮ ಅರ್ಥಶಾಸ್ತ್ರ | 6 | 9035459768 |
| 13. | ಡಾ. ಟಿ.ಪಿ. ಶಶಿಕುಮಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಪರಿಮಾಣಾತ್ಮಕ ತಂತ್ರಗಳು | 6 | 9036342507 |
| 14. | ಡಾ. ಶಿವಕುಮಾರ ಸ್ವಾಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಅಭಿವೃದ್ಧಿ ಅರ್ಥಶಾಸ್ತ್ರ | 6 | 9972165817 |
| 15. | ಡಾ. ಆರ್.ಎಚ್. ಪವಿತ್ರ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಎಕಾನೊಮೆಟ್ರಿಕ್ಸ್ | 12 | 9845659987 |
| ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 16. | ಡಾ. ಕೆ.ಜೆ. ಸುರೇಶ್ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ರಾಜಕೀಯ ಸಿದ್ಧಾಂತ | 31 | - |
| 17. | ಡಾ. ಶಂಕರನಾರಾಣಪ್ಪ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಸಾರ್ವಜನಿಕ ಆಡಳಿತ | 6 | 9341243823 |
| 18. | ಡಾ. ಆನಂದಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ರಾಜಕೀಯ ಸಿದ್ಧಾಂತ | 6 | 9916007312 |
| ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 19. | ಡಾ. ಹೆಚ್.ಕೆ ಜಗದೀಶ್ ಬಾಬು. | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಸಾರ್ವಜನಿಕ ಆಡಳಿತ | 6 | 9880255118 |
| ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 20. | ಡಾ. ಎಚ್.ಆರ್. ಜಯಪಾಲ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ಸಮಾಜಶಾಸ್ತ್ರೀಯ ಸಿದ್ಧಾಂತಗಳು | 12 | 7406600034 |
| ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 21. | ಡಾ. ತೇಜಸ್ವಿ ನವಿಲೂರು | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ., | ವರದಿ ಮತ್ತು ಸಂಪಾದನೆ | 6 | 9844009777 |
| ವಾಣಿಜ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 22. | ಡಾ. ವಿ. ಮಹೇಶ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ., ಪಿಎಚ್.ಡಿ., | ಅಕೌಂಟಿಂಗ್ ಅಂಡ್ ಟ್ಯಾಕ್ಸೇಷನ್ | 6 | 9844667411 |
| 23. | ಡಾ. ಆರ್. ಛಾಯಾ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ., ಪಿಎಚ್.ಡಿ., | ಕಾಸ್ಟ್ ಅಕೌಂಟಿಂಗ್ | 6 | 9980974834 |

| | | | | | | |
|---|---|---|---|---|---|---|
| ನಿರ್ವಹಣಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 24. | ಡಾ. ಸಿ. ಮಹದೇವಮೂರ್ತಿ | ಸಹ ಪ್ರಾಧ್ಯಾಪಕರು | ಎಂ.ಬಿ.ಎ.ಪಿ ಎಚ್.ಡಿ., | ಅಂತರಾಷ್ಟ್ರೀಯ ವ್ಯಾಪಾರ | 6 | 9342121583 |
| 25. | ಡಾ. ಹೆಚ್. ರಾಜೇಶ್ವರಿ | ಸಹಾಯಕ ಪ್ರಾಧ್ಯಾಪಕರು | ಎಂ.ಬಿ.ಎ. ಪಿಎಚ್.ಡಿ. | ಆಪರೇಷನ್ ರಿಸರ್ಚ್ | 6 | 9845528357 |
| 26. | ಡಾ. ಪಿ. ಸವಿತ | ಸಹಾಯಕ ಪ್ರಾಧ್ಯಾಪಕರು | ಎಂ.ಬಿ.ಎ. ಪಿಎಚ್.ಡಿ. | ಹಣಕಾಸು | 6 | 9986846176 |
| ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 27. | ಡಾ. ಎಸ್. ನಿರಂಜನ ರಾಜ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ.,ಪಿ ಎಚ್.ಡಿ., | ಸೂಕ್ಷ್ಮಜೀವಶಾಸ್ತ್ರ | 6 | 9886859350 |
| ಜೈವಿಕತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 28. | ಡಾ. ಎನ್.ಜಿ. ರಾಜು | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ.,ಪಿ ಎಚ್.ಡಿ., | ಜೈವಿಕ ತಂತ್ರಜ್ಞಾನ | 6 | 9448267255 |
| ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 29. | ಡಾ. ಎಂ. ಉಮಾಶಂಕರ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ರಸಾಯನಶಾಸ್ತ್ರ | 6 | 9482510061 |
| ಜೈವಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 30. | ಡಾ. ನಟರಾಜು ಅಂಗಸ್ವಾಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಜೈವಿಕ ತಂತ್ರಜ್ಞಾನ | 6 | 9620697355 |
| ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 31. | ಡಾ. ಎಂ.ಎಸ್. ಹೇಮಲತಾ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ | 6 | 9482566371 |
| ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 32. | ಡಾ. ಎಸ್. ಸುಗ್ಮಾ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಚಿಕಿತ್ಸಕ ಮನೋವಿಜ್ಞಾನ | 6 | 9945112468 |
| 33. | ಡಾ. ಪಿ. ಮಹದೇವಸ್ವಾಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಮನೋರೋಗ ನಿದಾನಶಾಸ್ತ್ರ | 6 | 9880239670 |
| ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 44. | ಡಾ. ಜೆ.ಎಸ್. ಚಂದ್ರಶೇಖರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಪರಿಸರ | 6 | 8197242133 |
| ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ | | | | | | |
| 35. | ಡಾ. ಎನ್. ಲಕ್ಷ್ಮೀ | ಸಹ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ಸಮಾಜಶಾಸ್ತ್ರ | 24 | 9886917952 |
| 36. | ಡಾ. ಷಣ್ಮುಖ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ತತ್ತ್ವಶಾಸ್ತ್ರ | 5 | 9481438829 |
| 37. | ಡಾ. ಆರ್. ನಾಗೇಂದ್ರಕುಮಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ವಿಶೇಷ ಶಿಕ್ಷಣ | 5 | 9980737186 |
| 38. | ಡಾ. ಎಂ. ಜಾನಕಿ | ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ಮನೋವಿಜ್ಞಾನ | 5 | 9945024886 |

| | | | | | | |
|---|---|---|---|---|---|---|
| 39. | ಡಾ. ಶೈಲಜಾ ಪಿ. ಶಾನಭಾಗ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ತಂತ್ರಜ್ಞಾನ | 5 | 9483760099 |
| 40. | ಡಾ. ಆರ್. ಶರಣಮ್ಮ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶೈಕ್ಷಣಿಕ ಆಡಳಿತ | 5 | 9739970866 |
| 41. | ಡಾ. ಎನ್. ಕೃಷ್ಣಪ್ಪ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಸಂಶೋಧನಾ ವಿಧಾನ | 5 | 9964574944 |
| **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | | | | | | |
| 42. | ಡಾ. ಎನ್.ಆರ್. ಶಿಲ್ಪ ರಾಣಿ | ಸಹಾಯಕ ಪ್ರಾಧ್ಯಾಪಕರು | ಎಮ್.ಎಲ್.ಐ.ಎಸ್ಸಿ., ಪಿಎಚ್.ಡಿ., | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 6 | 8884052680 |

## 4. ಪ್ರವೇಶಾತಿಗೆ ಸಂಬಂಧಿಸಿದ ಮುಖ್ಯ ಸೂಚನೆಗಳು

1. ಪಿಹೆಚ್.ಡಿ ಕಾರ್ಯಕ್ರಮವನ್ನು ಕೇವಲ ರೆಗ್ಯುಲರ್ ಮೋಡ್‌ನಲ್ಲಿ ಮಾತ್ರ ನಡೆಸಲಾಗುತ್ತದೆ.
2. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಶುಲ್ಕ ಪಾವತಿಸಿದ ಚಲನ್‌ನೊಂದಿಗೆ (ವಿಶ್ವವಿದ್ಯಾನಿಲಯದ ಪ್ರತಿ) ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಲ್ಲಿಸತಕ್ಕದ್ದು.
4. ಸೇವೆಯಲ್ಲಿರುವ ಅಭ್ಯರ್ಥಿಗಳು ಪ್ರವೇಶಾತಿ ಲಭಿಸಿದ ನಂತರ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರದ ಮೂಲಕ ಅರ್ಜಿ ಸಲ್ಲಿಸಬೇಕು.
5. ಸಂಬಂಧಪಟ್ಟ ದಾಖಲೆಗಳನ್ನು ಧೃಡೀಕರಿಸಿ ಲಗತ್ತಿಸಬೇಕು
6. ವಿಶ್ವವಿದ್ಯಾನಿಲಯದ ಜಾಲತಾಣ/ ವೆಬ್‌ಸೈಟ್‌ನಿಂದ ಅರ್ಜಿ ನಮೂನೆ ಹಾಗೂ ನಾಲ್ಕು ಪ್ರತಿಗಳ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ವಿಶ್ವವಿದ್ಯಾನಿಲಯದ ಪ್ರವೇಶವನ್ನು ಪಡೆಯಬೇಕು. ಅರ್ಜಿ ನಮೂನೆ ಹಾಗೂ ಚಲನ್ ಇವೆರಡೂ ಜಾಲತಾಣದಲ್ಲಿ ಲಭ್ಯವಿರುತ್ತದೆ. ಕರಾಮುವಿಯ www.ksoumysore.karnataka.gov.in ಅಧಿಕೃತ ಜಾಲತಾಣದಿಂದ ಪಡೆಯದ ಯಾವುದೇ ಅರ್ಜಿಯನ್ನು ಮಾನ್ಯ ಮಾಡುವುದಿಲ್ಲ.
7. ಎಲ್ಲಾ ಸೀಟ್‌ಗಳನ್ನು ತುಂಬುವ ಅಥವಾ ತುಂಬದಿರುವ ಹಕ್ಕನ್ನು ವಿಶ್ವವಿದ್ಯಾನಿಲಯ ಕಾಯ್ದಿರಿಸಿದೆ.
8. ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಮೈಸೂರಿನಲ್ಲಿ ನಡೆಸಲಾಗುವುದು
9. ಪ್ರವೇಶ ಪರೀಕ್ಷೆಯನ್ನು 100 ಅಂಕಗಳಿಗೆ ಬಹು ಆಯ್ಕೆ ಪ್ರಶ್ನೆಗಳೊಂದಿಗೆ ನಡೆಸಲಾಗುವುದು. ಪ್ರವೇಶ ಪರೀಕ್ಷೆಯಲ್ಲಿ 100 ಪ್ರಶ್ನೆಗಳಿದ್ದು ಪ್ರತಿಪ್ರಶ್ನೆಗೆ 1 ಅಂಕ. ಪ್ರವೇಶ ಪರೀಕ್ಷೆಯ ಪಠ್ಯಕ್ರಮವು ಶೇ 50 ರಷ್ಟು ಸಂಶೋಧನಾ ಕ್ರಮ (Research Methodology) ಮತ್ತು ಶೇ 50 ರಷ್ಟು ಅಧ್ಯಯನ ವಿಷಯಕ್ಕೆ (Core Subject) ಸಂಬಂಧಿಸಿರುತ್ತದೆ.
10. ಪಿಹೆಚ್.ಡಿ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಲು ಕನಿಷ್ಠ 100 ಕ್ಕೆ 50 ಅಂಕ ಗಳಿಸಬೇಕು (ಪ.ಜಾ/ಪ.ಪಂ/ಗುಂಪು–1/ವಿಕಲ ಚೇತನ ಅಭ್ಯರ್ಥಿಗಳಿಗೆ ಕನಿಷ್ಠ 100 ಕ್ಕೆ 45)
11. UGC/UGC-CSIR National Eligibility Test for Junior Research Fellowship/GATE/GRF/ SLET/M.Phil ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಹಾಗೂ FIP, QIP ಮೇಲೆ ಬಂದಿರುವ ಅಭ್ಯರ್ಥಿಗಳನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು. ಸಂದರ್ಶನ ಮತ್ತು ಸಂಬಂಧಪಟ್ಟ ಪರೀಕ್ಷೆಯಲ್ಲಿ ಪಡೆದ ಅಂಕಗಳ 50:50 ಅಧಾರದ ಮೇಲೆ Merit List ತಯಾರಿಸಲಾಗುವುದು.

12. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ಪ್ರವೇಶ ಪರೀಕ್ಷೆಯ ವಿನಾಯಿತಿ ಮತ್ತು ಸಂದರ್ಶನಕ್ಕೆ ಹಾಜರಾಗುವುದರಿಂದ ಪಿಹೆಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅರ್ಹರಾಗುತ್ತಾರಯೇ ಹೊರತು ಪ್ರವೇಶ ಖಚಿತವಾಗುವುದಿಲ್ಲ.
13. ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ.
14. ವಿದ್ಯಾರ್ಥಿಯು ತನ್ನ ವಯಸ್ಸು / ವಿದ್ಯಾರ್ಹತೆ ಇವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೊಂದಣಿಯಿಂದ ಹೊರಗಿಡಲಾಗುವುದು, ಕಾನೂನು ಪ್ರಕಾರ ದಂಡ ವಿಧಿಸಲಾಗುವುದು ಹಾಗೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
15. ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು.
16. ಎಲ್ಲಾ ನ್ಯಾಯ ವ್ಯಾಜ್ಯಗಳು ಮೈಸೂರು ನಗರ ನ್ಯಾಯಾಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತವೆ.
17. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರನ್ನು ಸಂಪರ್ಕಿಸುವುದು

**ಪ್ರವೇಶ ಮಿತಿ**

ಯುಜಿಸಿ ನಿಯಮಾವಳಿ 2016 ರ ಹಾಗೂ ಕರಾಮುವಿ ಪಿಹೆಚ್.ಡಿ ಅಧ್ಯಾದೇಶ ( Degree of Doctor of Philosophy) 2018 ಅನ್ವಯ ಸಹಾಯಕ ಪ್ರಾಧ್ಯಾಪಕರು 4 ವಿದ್ಯಾರ್ಥಿಗಳಿಗೆ, ಸಹ ಪ್ರಾಧ್ಯಾಪಕರು 6 ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರು 8 ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬಹುದು.

**ಮೀಸಲಾತಿ ನೀತಿ**

ಪಿಹೆಚ್.ಡಿ ಕಾರ್ಯಕ್ರಮದ ಪ್ರವೇಶಾತಿಯ ಮೀಸಲಾತಿಯು ಯುಜಿಸಿ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿ ಪಡಿಸಿದ ಹಾಗೆ ಇರುತ್ತದೆ.

## 5. ಪ್ರವೇಶಾತಿ ಶುಲ್ಕ ಸಂರಚನೆ

| ಕ್ರಮ ಸಂ. | ವಿವರ | ಶುಲ್ಕ (ರೂ., ) |
|---|---|---|
| 1 | ಅರ್ಜಿ ಸಂಸ್ಕರಣಾ ಶುಲ್ಕ | 2000 |
| 2 | ತಾತ್ಕಾಲಿಕ ನೋಂದಣಿ | 1500 |
| 3 | ನೋಂದಣಿ | 6000 |
| 4 | ಭೋದನಾ ಶುಲ್ಕ | 5000 ಪ್ರತಿ ವರ್ಷ |
| 5 | ಕೋರ್ಸ್ ವರ್ಕ್ ಶುಲ್ಕ | 2000 |
| 6 | ಕೋರ್ಸ್ ವರ್ಕ್ ಪರೀಕ್ಷಾ ಶುಲ್ಕ | 2000 |
| 7 | ವಾರ್ಷಿಕ ವರದಿ/ ವಾರ್ಷಿಕ ಶುಲ್ಕ | 8000 ಪ್ರತಿ ವರ್ಷ |
| 8 | ಅಂತಿಮ ಸಿನಾಪ್ಸಿಸ್ | 1000 |
| 9 | ಪ್ರಬಂಧ ಸಲ್ಲಿಕೆ | 7000 |
| 10 | ಮಾರ್ಗದರ್ಶಕರ ಬದಲಾವಣೆ | 3000 |
| 11 | ಶೀರ್ಷಿಕೆ ಬದಲಾವಣೆ | 3000 |

| | | |
|---|---|---|
| 12 | ಲ್ಯಾಬ್ ಶುಲ್ಕ ( ವಿಜ್ಞಾನ ಕಾರ್ಯಕ್ರಮಗಳಿಗೆ ಮಾತ್ರ) | 5000 (10% ಪ್ರತಿ ವರ್ಷ ಹೆಚ್ಚಳದೊಂದಿಗೆ) |
| 13 | ಗ್ರಂಥಾಲಯ ಶುಲ್ಕ | 2000 |
| 14 | ವಿಸ್ತರಣಾ ಶುಲ್ಕ | 10000 |
| 15 | ಪ್ರಬಂಧ ಪ್ರಕಟಣೆ ಪರವಾನಗಿ ಶುಲ್ಕ | 6000 |
| 18 | ಇತರ ಯಾವುದೆ ಪ್ರಮಾಣ ಪತ್ರ (ಕೋರಿಕೆಯ ಮೇರೆಗೆ) | 500 |
| 19 | ಪರಿಷ್ಕೃತ ಪ್ರಬಂಧ ಸಲ್ಲಿಕೆ | 4000 |
| 20 | ನಕಲು ತಪಾಸಣೆ ಶುಲ್ಕ | 100 ಮೊದಲ ತಪಾಸಣೆ<br>300 ಎರಡನೇ ತಪಾಸಣೆ<br>1000 ಮೂರನೇ ತಪಾಸಣೆ<br>3000 ನಾಲ್ಕನೇ ತಪಾಸಣೆ |
| 21 | ವಿಡಿಯೋ ಸಮ್ಮೇಳನದ ಮೂಲಕ ವೈವಾ | 15000 |

- ಪ್ರ.ಜಾ/ಪ್ರ.ಪಂ/ ಪ್ರ. ವರ್ಗ –1 ದ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಸಂಸ್ಕರಣಾ ಶುಲ್ಕದಲ್ಲಿ ಶೇ 50 ರಷ್ಟು ರಿಯಾಯಿತಿ ನೀಡಲಾಗುವುದು

**ಅರ್ಜಿ ಸಲ್ಲಿಸುವ ರೀತಿ**

1. ನಿಗದಿತ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಪಿಹೆಚ್.ಡಿಗೆ ಅರ್ಜಿ ಸಲ್ಲಿಸಬಹುದು.
2. ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ/ ವೆಬ್‌ಸೈಟ್‌ನಿಂದ ಅರ್ಜಿ ನಮೂನೆ ಅನ್ನು ಡೌನ್‌ಲೋಡ್ ಮಾಡಿಕೊಂಡು ವಿಶ್ವವಿದ್ಯಾನಿಲಯದ ಪ್ರವೇಶವನ್ನು ಪಡೆಯಬೇಕು.
3. ಭರ್ತಿ ಮಾಡಿದ ಅರ್ಜಿಗಳನ್ನು ದೃಡೀಕೃತ ನಕಲು ಪ್ರತಿಗಳು ಮತ್ತು ರೂ 2000/– ಅರ್ಜಿ ಸಂಸ್ಕರಣಾ ಶುಲ್ಕದೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು

> ಮುಖ್ಯಸ್ಥರು,
>
> ........................ ...... ಅಧ್ಯಯನ ಮತ್ತು ಸಂಶೋಧನಾ ವಿಭಾಗ
>
> ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು

4. ಅಭ್ಯರ್ಥಿಗಳು ದೇಶದಾದ್ಯಂತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್.ಬಿ.ಐ) ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಚಲನ್ ಮೂಲಕ ಪಾವತಿಸಬೇಕು. ಚೆಕ್/ಮನಿ ಆರ್ಡರ್/ಪೋಸ್ಟಲ್ ಆರ್ಡರ್ ಇವುಗಳನ್ನು ಸ್ವೀಕರಿಸುವುದಿಲ್ಲ.

ಪ್ರವೇಶದ ಅರ್ಜಿಯೊಂದಿಗೆ ಸಲ್ಲಿಸಬೇಕಬೇಕಾಗಿರುವ ದಾಖಲಾತಿಗಳು (ಧೃಡೀಕೃತ ಛಾಯಾಪ್ರತಿ)

ಅ. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ.

ಆ. ಪಿಯುಸಿ ಅಂಕಪಟ್ಟಿ ಅಥವಾ ತತ್ಸಮಾನ ಅಂಕಪಟ್ಟಿ.

ಇ. ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಕ್ಕೆ ಅಂಕಪಟ್ಟಿಗಳು.

ಈ. ನೆಟ್/ಸ್ಲೆಟ್/ಗೇಟ್/ಎಂ.ಫಿಲ್

ಉ. ಎಸ್.ಸಿ./ಎಸ್.ಟಿ./ಪ್ರ.ವರ್ಗ –1 ಜಾತಿ ದೃಢೀಕರಣ ಪತ್ರ. (ಅನ್ವಯವಾದರೆ ಮಾತ್ರ)

ಊ. ಆಧಾರ್ ಕಾರ್ಡ್.

ಋ. ಎರಡು ಸ್ಟ್ಯಾಂಪ್ ಅಳತೆಯ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಅರ್ಜಿ ಪರಿಶೀಲನೆ ವೇಳೆ ಸಲ್ಲಿಸುವುದು.

ಎ. ಚಲನ್

**ಗುರುತಿನ ಚೀಟಿ**

ಗುರುತಿನ ಚೀಟಿ ಹಾಗೂ ಖಾಯಂ ನೊಂದಣಿ ಸಂಖ್ಯೆಯನ್ನು ವಿದ್ಯಾರ್ಥಿಗಳಿಗೆ ಪ್ರವೇಶವು ಅಂಗೀಕೃತವಾದ ನಂತರ ನೀಡಲಾಗುವುದು. ಗುರುತಿನ ಚೀಟಿಯನ್ನು ಶಿಕ್ಷಣ ಕ್ರಮ ಮುಗಿಯುವವರೆಗೂ ನವೀಕರಿಸಿಕೊಳ್ಳಬೇಕು. ವಿಶ್ವವಿದ್ಯಾನಿಲಯದೊಂದಿಗೆ ವ್ಯವಹರಿಸುವ ಎಲ್ಲಾ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಯು ತನ್ನ ನೊಂದಣಿ ಸಂಖ್ಯೆಯನ್ನು ಬರೆಯಬೇಕು. ಈ ಗುರುತಿನ ಚೀಟಿಯ ಮೂಲಕ ಗ್ರಂಥಾಲಯ ಮತ್ತಿತರ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.

## 6. ಪಿ.ಹೆಚ್.ಡಿ ಕಾರ್ಯಕ್ರಮ

**ಪೀಠಿಕೆ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಕಾರ್ಯಕ್ರಮವು ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳ ಪಿಹೆಚ್.ಡಿ ಕಾರ್ಯಕ್ರಮಕ್ಕೆ ಸಮಾನವಾಗಿರುತ್ತದೆ. ಈ ಕಾರ್ಯಕ್ರಮವು ವಿಶ್ವವಿದ್ಯಾನಿಲಯ ಧನ ಸಹಾಯ ಅಯೋಗವು 05 ಮೇ 2016ರಂದು (ಪಿಹೆಚ್.ಡಿ/ಎಂ.ಫಿಲ್ ಪದವಿಗಳ ಪ್ರದಾನ ಮಾಡಲು ಕನಿಷ್ಠ ಗುಣಮಟ್ಟ ಮತ್ತು ವಿಧಾನ) ನಿಯಮಾವಳಿ– 2016 ಮತ್ತು ಕರಾಮುವಿಯು ಪಿಹೆಚ್.ಡಿ ಅಧ್ಯಾದೇಶ ( Degree of Doctor of Philosophy 2018) ಅನ್ವಯ ನಡೆಯುತ್ತದೆ.

ಈ ಕಾರ್ಯಕ್ರಮವು ಮೂಲತಃ ಸಂಶೋಧನೆಯಲ್ಲಿ ವೃತ್ತಿಯನ್ನು ಆರಂಭಿಸುವವರಿಗೆ ವಿನ್ಯಾಸಗೊಳಿಸಲ್ಪಟ್ಟಿದೆ. ಈ ಕಾರ್ಯಕ್ರಮವು ಸಂಶೋಧನಾ ವಿಷಯದಲ್ಲಿ ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯವನ್ನು ನೀಡುತ್ತದೆ.

**ಸಂಶೋಧನ ಸಲಹಾ ಸಮಿತಿ**

ಸಂಶೋಧನಾ ಸಲಹಾ ಸಮಿತಿಯು ವಿಶ್ವವಿದ್ಯಾನಿಯದಿಂದ, ಸಾರಲೇಖ (synopsis) ಪರಾಮರ್ಶೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಅಧ್ಯಯನ ವಿಷಯ ವಿನ್ಯಾಸ ಮತ್ತು ಸಂಶೋಧನಾ ಕ್ರಮಗಳ ಬಗ್ಗೆ ಮಾರ್ಗದರ್ಶನ, ಹಾಗೂ ಅವರ ಸಂಶೋಧನಾ ಕಾರ್ಯದ ಪ್ರಗತಿ ಪರೀಶೀಲನೆಗಳನ್ನು ಮಾಡಲು ರಚಿಸಲ್ಪಟ್ಟಿದೆ.

**ಪದವಿಯನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿ:**

- ವಿದ್ಯಾರ್ಥಿಯು ತಾತ್ಕಾಲಿಕ ನೋಂದಣಿ ಆದ ದಿನದಿಂದ ಕನಿಷ್ಠ ಮೂರು ವರ್ಷ ಹಾಗೂ ಗರಿಷ್ಠ ಆರು ವರ್ಷಗಳಲ್ಲಿ ಸಂಶೋಧನಾ ಪ್ರಬಂಧ ಸಲ್ಲಿಸಬೇಕು.
- ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ (ಶೇ 40ಕ್ಕೂ ಅಧಿಕ) ಗರಿಷ್ಠ ಅವಧಿಯಲ್ಲಿ 2 ವರ್ಷ ವಿಸ್ತರಣೆ ನೀಡಬಹುದಾಗಿದೆ.
- ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ, ವಿಭಾಗದ ಮುಖ್ಯಸ್ಥರ ಮೂಲಕ ನಿಗದಿತ ಶುಲ್ಕವನ್ನು ಕಟ್ಟಿ ಒಂದು ವರ್ಷದವರೆಗೆ ವಿಸ್ತರಣೆಗೆ ಅರ್ಜಿ ಸಲ್ಲಿಸಬಹುದು.
- ಒಂದು ವೇಳೆ ಏಳು ವರ್ಷಗಳ ನಂತರವೂ ವಿದ್ಯಾರ್ಥಿಯು ಮಹಾಪ್ರಬಂಧವನ್ನು ಸಲ್ಲಿಸಲು ಆಗದಿದ್ದಲ್ಲಿ ಅವರ ನೋಂದಣಿಯನ್ನು ರದ್ದುಗೊಳಿಸಲಾಗುವುದು. ಅಂತಹ ವಿದ್ಯಾರ್ಥಿಗಳು ಮತ್ತೆ ದಾಖಾಲಾಗಲು ಇಚ್ಛಿಸಿದಲ್ಲಿ ಅವರು ಪ್ರವೇಶ ಪರೀಕ್ಷೆಯನ್ನು ಬರೆಯುವುದರಿಂದ ಪ್ರಾರಂಭಿಸಬೇಕು.
- ಅಪರೂಪದ ಸಂದರ್ಭಗಳಲ್ಲಿ ಸಂಶೋಧನ ಸಲಹಾ ಸಮಿತಿ ಮತ್ತು ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ ಅವಧಿ ಮುಗಿಯುವ ಮುನ್ನವೇ ಇನ್ನೊಂದು ವರ್ಷ ವಿಸ್ತರಣೆಗೆ ನಿಗದಿತ ಶುಲ್ಕವನ್ನು ಕಟ್ಟಿ ಅರ್ಜಿ ಸಲ್ಲಿಸಬಹುದು.

- ವಿದ್ಯಾರ್ಥಿಗೆ ಯಾವುದಾದರೂ ಗಂಭೀರ ಸಮಸ್ಯೆಗಳಾಗಿದ್ದಂತಹ ಅತ್ಯಪರೂಪದ ಸಂದರ್ಭಗಳಲ್ಲಿ ಸಂಶೋಧನ ಸಲಹಾ ಸಮಿತಿ ಮತ್ತು ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ ಅವಧಿ ಮುಗಿಯುವ ಮುನ್ನವೇ ಇನ್ನೊಂದು ವರ್ಷ ವಿಸ್ತರಣೆಗೆ ನಿಗದಿತ ಶುಲ್ಕವನ್ನು ಕಟ್ಟಿ ವಿಭಾಗದ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬಹುದು. ಸಂಶೋಧನ ಸಲಹಾ ಸಮಿತಿಯ ಅಭಿಪ್ರಾಯವನ್ನು ಕುಲಪತಿಯವರಿಗೆ ಕಳುಹಿಸಿಬಹುದು. ಇದರ ನಂತರವೂ ಮಹಾಪ್ರಬಂಧವನ್ನು ಸಲ್ಲಿಸಲು ಆಗದಿದ್ದಲ್ಲಿ. ಅಂತಹ ವಿದ್ಯಾರ್ಥಿಗಳು ಮತ್ತೆ ದಾಖಲಾಗಬೇಕು.

### 6.3 ಪಿಹೆಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶಾರ್ಹತೆ

- ಪಿಹೆಚ್.ಡಿ ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕನಿಷ್ಠ ಶೇ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವಾ ವೃತ್ತಿಪರ ಪದವಿ ಪೂರೈಸಿರಬೇಕು ಅಥವಾ ಯುಜಿಸಿಯ 7–ಅಂಶಗಳ ಮಾನದಂಡದಲ್ಲಿ ಅದರ ತತ್ಸಮಾನವಾದ ಗ್ರೇಡ್ ಅಥವಾ ಅನುಮೋದಿತ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆಯಿಂದ ಮಾನ್ಯತೆಗೊಳಗಾಗಿರುವ ಯಾವುದೇ ವಿದೇಶಿ ಸಂಸ್ಥೆಯಿಂದ ತತ್ಸಮಾನವಾದ ಪದವಿ ಹೊಂದಿರಬೇಕು.
- ಯಾವುದೇ ಭಾರತೀಯ ಸಂಸ್ಥೆ ಅಥವಾ ಭಾರತೀಯ ಸಂಸ್ಥೆಯಿಂದ ಅನುಮೋದಿತ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆಯಿಂದ ಮಾನ್ಯತೆಗೊಳಗಾಗಿರುವ ಯಾವುದೇ ವಿದೇಶಿ ಸಂಸ್ಥೆಯಿಂದ ಎಂ.ಫಿಲ್ ಪದವಿ ಹೊಂದಿರಬೇಕು.
- ಇದೇ ಸಂಸ್ಥೆಯಿಂದ ಎಂ.ಫಿಲ್ ಪ್ರಬಂಧ ಸಲ್ಲಿಸಿ ವೈವಾ ಕಾಯ್ದಿರಿಸಿದವರೂ ಅರ್ಜಿ ಸಲ್ಲಿಸಬಹುದು
- ಪ.ಜಾ/ಪ.ಪಂ/ಗುಂಪು–1/ವಿಕಲಚೇತನ ಅಭ್ಯರ್ಥಿಗಳು ಅಥವಾ 1992 ಮಾರ್ಚ್ 31ರ ಒಳಗೆ ಬೋಧಕರು, ಗ್ರಂಥಪಾಲಕರು, ದೈಹಿಕ ಶಿಕ್ಷಕರು ಆಗಿ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಖಾಯಂ ಆಗಿ ಸೇವೆಯಲ್ಲಿರುವವರು ಇನ್ನೂ ಸೇವೆಯಲ್ಲಿದ್ದರೆ ಕನಿಷ್ಠ ಶೇ 50 ಅಂಕ ಗಳಿಸಿರಬೇಕು.
- ಒಂದು ವೇಳೆ ಸ್ನಾತಕೊತ್ತರ ಪದವಿಯ ಅಂಕಗಳು ಗ್ರೇಡ್/ಕ್ರೆಡಿಟ್/ ಸಂಚಿತ ಅಂಶಗಳ ರೂಪದಲ್ಲಿ ಅಂಕಪಟ್ಟಿ/ಟ್ರಾನ್ಸ್‌ಸ್ರಿಪ್ಟ್ ರೂಪದಲಿ ಇದ್ದರೆ ಅದನ್ನು ಶೇಕಡಾವರು ರೂಪದಲ್ಲಿ ಪರಿವರ್ತಿಸಿ ಮೊದಲಿನ 2 ಅಂಶಗಳ ಆಧಾರದ ಮೇಲೆ ಪರಿಗಣಿಸುವುದು
- ಇತರೆ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ವಿನಾಯಿತಿಯನ್ನು ಕಾಲಕಾಲಕ್ಕೆ ಅಯೋಗದ ತೀರ್ಮಾನಗಳಂತೆ ನೀಡಲಾಗುವುದು.

## 7.0 ನೋಂದಣಿಯ ಮೊದಲ ಪ್ರಮುಖ ಹಂತಗಳು

1. **ಅರ್ಜಿ ಸಲ್ಲಿಕೆ:** ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗಕ್ಕೆ ಅರ್ಜಿ ಸಲ್ಲಿಸುವುದು. (ಇದನ್ನು ಅರ್ಜಿ – ಎ) ಎಂದು ಕರೆಯಲಾಗುವುದು.
2. **ಸಾಮಾನ್ಯ ಪ್ರವೇಶ ಪರೀಕ್ಷೆ:** ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳುವುದು. ಅದರಲ್ಲಿ ಅರ್ಹರಾದವರು ಸಂದರ್ಶನಕ್ಕೆ ಹಾಜರಾಗುವುದು. ನೆಟ್/ಸ್ಲೆಟ್/ಗೇಟ್/ಎಂ.ಫಿಲ್ ಪಾಸಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.
3. **ಸಂದರ್ಶನ:** ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆದ ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು.
4. **ಅಭ್ಯರ್ಥಿಗಳ ಆಯ್ಕೆ:** ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ಜಾಲತಾಣದಲ್ಲಿ ಹಾಕಲಾಗುವುದು
5. **ಮಾರ್ಗದರ್ಶಕರ ಹಂಚಿಕೆ:** ಪ್ರತಿ ವಿದ್ಯಾಥಿಗೆ ಮಾರ್ಗದರ್ಶಕರನ್ನು ಗುರುತಿಸಲಾಗುವುದು
6. **ವಿಷಯದ ಆಯ್ಕೆ:** ಮಾರ್ಗದರ್ಶಕರನ್ನು ನಿರ್ದಿಷ್ಟಪಡಿಸಿದ ನಂತರ ವಿದ್ಯಾರ್ಥಿಯು ಮಾರ್ಗದರ್ಶಕರ ಜೊತೆ ಸಮಾಲೋಚಿಸಿ ಸಂಶೋಧನಾ ವಿಷಯ/ಶೀರ್ಷಿಕೆಯನ್ನು ನಿರ್ಧರಿಬೇಕು. ಇದನ್ನು ಸಂಶೋಧನ ಸಲಹಾ ಸಮಿತಿಯ ಮುಂದೆ ಪ್ರಸ್ತುತ ಪಡಿಸಬೇಕು.

7. **ನೋಂದಣಿ ಪೂರ್ವ ಕೊಲೋಕಿಯಂ:** ನೋಂದಣಿ ಪೂರ್ವ ಕೊಲೋಕಿಯಂಯನ್ನು ಏರ್ಪಾಡು ಮಾಡಲಾಗುವುದು.
8. **ತಾತ್ಕಾಲಿಕ ನೋಂದಣಿ:** ಇದರ ನಂತರ ಅಭ್ಯರ್ಥಿಗಳು ಇನ್ನೊಂದ ಅರ್ಜಿ (ಅರ್ಜಿ–ಬಿ) ಅನ್ನು ಸಂಶೋಧನಾ ಪ್ರಸ್ತಾವನೆ ಜೊತೆ ಸಂಬಂದ ಪಟ್ಟ ಪಿ.ಜಿ. ವಿಭಾಗಕ್ಕೆ ತಾತ್ಕಾಲಿಕ ನೋಂದಣಿಗಾಗಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸಬೇಕು.
9. **ಕೋರ್ಸ್ ವರ್ಕ್:** ಎಲ್ಲಾ ತಾತ್ಕಾಲಿಕ ನೋಂದಾಯಿತ ಅಭ್ಯರ್ಥಿಗಳು ಕೋರ್ಸ್ ವರ್ಕ್ ತೆಗೆದುಕೊಳ್ಳಬೇಕು
10. **ಕೋರ್ಸ್ ವರ್ಕ್ ಪರೀಕ್ಷೆ:** ಕೋರ್ಸ್ ವರ್ಕ್ ಅನ್ನು ಯಶಸ್ವಿಯಾಗಿ ಮುಗಿಸಿದ ನಂತರ ಅವರು ಕೋರ್ಸ್ ವರ್ಕ್ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಇದರಲ್ಲಿ ಶೇ 55 ಕ್ಕೂ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು ಪಿಹೆಚ್.ಡಿ ನೋಂದಣಿಗೆ ಅರ್ಹರಾಗಿರುತ್ತಾರೆ. ಶೇ 55ಕ್ಕಿಂತಾ ಕಡಿಮೆ ಅಂಕ ಪಡೆದವರು ಅರ್ಹರಾಗುವುದಿಲ್ಲ
11. **ಪಿಹೆಚ್.ಡಿ ನೋಂದಣಿ:** ಅರ್ಹ ಅಭ್ಯರ್ಥಿಗಳು ಅಂತಿಮ ಅರ್ಜಿ (ಅರ್ಜಿ – ಸಿ) ಅನ್ನು ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. ಅವರು ಅದನ್ನು ಡೀನ್ (ಶೈ) ಅವರಿಗೆ ಪಿಹೆಚ್.ಡಿ ಕಾರ್ಯಕ್ರಮದ ನೋಂದಣಿ ಖಚಿತ ಪಡಿಸಲು ಕಳುಹಿಸುತ್ತಾರೆ.

**7.1 ಅರ್ಜಿ ಸಲ್ಲಿಕೆ:**

ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗಕ್ಕೆ ಅರ್ಜಿ ಸಲ್ಲಿಸುವುದು. (ಇದನ್ನು ಅರ್ಜಿ – ಎ) ಎಂದು ಕರೆಯಲಾಗುವುದು.

**7.2 ಸಾಮಾನ್ಯ ಪ್ರವೇಶ ಪರೀಕ್ಷೆ:**

- ಸ್ನಾತಕೋತ್ತರ ಪದವಿಯಲ್ಲಿ ಮೇಲೆ ಸೂಚಿಸಿರುವಂತ ಕನಿಷ್ಠ ವಿದ್ಯಾರ್ಹತೆ ಇರುವ ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳುವುದು.
- ನೆಟ್/ಸ್ಲೆಟ್/ಗೇಟ್/ಎಂ.ಫಿಲ್/ಜೆ.ಆರ್.ಎಫ್/ಜಿ.ಆರ್.ಇ ಪಾಸಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.
- ಸಾಮಾನ್ಯ ಪ್ರವೇಶ ಪರೀಕ್ಷೆಯ ಪಠ್ಯಕ್ರಮ ಮತ್ತಿತರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ವಿವರಗಳನ್ನು ವಿಭಾಗದಲ್ಲಿ ಅಂತಿಮ ಪಡಿಸಿ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
- ಪ್ರವೇಶ ಪರೀಕ್ಷೆಯನ್ನು 100 ಅಂಕಗಳಿಗೆ ನಡೆಸಲಾಗುವುದು. ಪ್ರತಿ ಪ್ರಶ್ನೆಗೆ ಒಂದು ಅಂಕಗಳು
- ಪ್ರವೇಶ ಪರೀಕ್ಷೆಯನ್ನು ಬಹು ಆಯ್ಕೆ ಪ್ರಶ್ನೆಗಳೊಂದಿಗೆ ನಡೆಸಲಾಗುವುದು.
- ಪ್ರವೇಶ ಪರೀಕ್ಷೆಯ ಪಠ್ಯಕ್ರಮವು ಶೇ 50 ರಷ್ಟು ಸಂಶೋಧನಾ ಕ್ರಮ (Research Methodology) ಮತ್ತು ಶೇ 50 ರಷ್ಟು ಅಧ್ಯಯನ ವಿಷಯಕ್ಕೆ (Core Subject) ಸಂಬಂಧಿಸಿರುತ್ತದೆ.
- ಪ್ರವೇಶ ಪರೀಕ್ಷೆಯ ಅವದಿ: 120 ನಿಮಿಷ
- ಪ್ರವೇಶ ಪರೀಕ್ಷೆಯ ಮಾನ್ಯತೆಯು ಅ ಶೈಕ್ಷಣಿಕ ವರ್ಷಕ್ಕೆ ಸೀಮಿತವಾಗಿರುತ್ತದೆ.

**7.3 ಸಂದರ್ಶನ:**

ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆದ ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು. ಸಂದರ್ಶನದಲ್ಲಿ ಈ ಕೆಳಕಂಡ ವಿಷಯಗಳನ್ನು ಪರಿಗಣಿಸಲಾಗುವುದು

- ಪ್ರಸ್ತಾವಿತ ವಿಷಯದಲ್ಲಿ ಸಂಶೋಧನೆ ಮಾಡಲು ಅಭ್ಯರ್ಥಿಯು ಯೋಗ್ಯರಾಗಿದ್ದರೇಯೇ?
- ಈ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸಲು ಅಗತ್ಯ ಸೌಲಭ್ಯಗಳಿವೆಯೇ?
- ಪ್ರಸ್ತಾವಿತ ಅಧ್ಯಯನ ವಿಷಯ ಉಪಯೋಗಕರವೇ?

ಸಂದರ್ಶನದ ನಂತರ ಮೀಸಲಾತಿಯನ್ನು ಒಳಗೊಂಡಂತೆ ಎಲ್ಲಾ ಅಭ್ಯರ್ಥಿಗಳ ಸಮಗ್ರ ಅರ್ಹತಾ ಪಟ್ಟಿ ತಯಾರಿಸಲಾಗುವುದು. ಅವರ ಪ್ರವೇಶ ಪರೀಕ್ಷೆ ಪಡೆದ ಅಂಕಗಳನ್ನು ಪರಿಗಣಿಸಲಾಗುವುದು. ಮುಂದುವರೆದು ಈ

ಅಂಕಗಳನ್ನು ಶೇ 70 ಕ್ಕೆ ಇಳಿಸಿ ಶೇ 30 ಕ್ಕೆ ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗುವುದು. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ವಿನಾಯಿತಿ ಪಡೆದ ಅಭ್ಯರ್ಥಿಗಳಿಗೆ ಶೇ 70 ಕ್ಕೆ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು.

**7.4 ಅಭ್ಯರ್ಥಿಗಳ ಆಯ್ಕೆ:** ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆದ ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಸಮಗ್ರ ಅರ್ಹತಾ ಪಟ್ಟಿ ತಯಾರಿಸಿಲಾಗುವುದು. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ಪ್ರವೇಶ ಪರೀಕ್ಷೆಯ ವಿನಾಯಿತಿ ಮತ್ತು ಸಂದರ್ಶನಕ್ಕೆ ಹಾಜರಾಗುವುದರಿಂದ ಪಿಹೆಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅರ್ಹರಾಗುತ್ತಾರಯೇ ಹೊರತು ಪ್ರವೇಶ ಖಚಿತವಾಗುವುದಿಲ್ಲ.

**7.5 ಮಾರ್ಗದರ್ಶಕರ ಹಂಚಿಕೆ:** ಪ್ರತಿ ಮಾರ್ಗದರ್ಶಕರ ಬಳಿ ಖಾಲಿ ಇರುವ ಸ್ಥಾನ, ವಿದ್ಯಾರ್ಥಿಯು ಅಪೇಕ್ಷಿಸುವ ಮಾರ್ಗದರ್ಶಕರು ಮತ್ತು ವಿಭಾಗದಲ್ಲಿ ಖಾಲಿ ಇರುವ ಸ್ಥಾನಗಳ ಮೇರೆಗೆ ವಿಭಾಗದ ಸ್ನಾತೋಕತ್ತರ ಅಧ್ಯಯನ ಮಂಡಳಿ ಮುಖ್ಯಸ್ಥರು ಒಂದು ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಬೇಕು.

**7.6 ವಿಷಯದ ಆಯ್ಕೆ:**

ಪ್ರತಿ ಅಭ್ಯರ್ಥಿಯು ಮಾರ್ಗದರ್ಶಕರನ್ನು ನಿರ್ದಿಷ್ಟಪಡಿಸಿದ ನಂತರ ವಿದ್ಯಾರ್ಥಿಯು ಮಾರ್ಗದರ್ಶಕರ ಜೊತೆ ಸಮಾಲೋಚಿಸಿ ಸಂಶೋಧನಾ ವಿಷಯ/ಶೀರ್ಷಿಕೆಯನ್ನು ನಿರ್ಧರಿಬೇಕು. ತಮ್ಮ ಸಂಶೋಧನೆಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಿದ್ದಪಡಿಸಿ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. ಇದರಲ್ಲಿ ಸಂಶೋಧನಾ ಉದ್ದೇಶ, ವಿಧಾನ, ಸಾಹಿತ್ಯ ಪರಾಮರ್ಶೆ, ಕಾರ್ಯ ಯೋಜನೆ ಮತ್ತು ಸಂಶೋಧನಾ ಮಹತ್ವಗಳನ್ನು ಒಳಗೊಂಡಿರಬೇಕು ಇದನ್ನು ಸಂಶೋಧನ ಸಲಹಾ ಸಮಿತಿಯ ಮುಂದೆ ಪ್ರಸ್ತುತ ಪಡಿಸಬೇಕು.

**7.7 ನೋಂದಣಿ ಪೂರ್ವ ಕೊಲೋಕಿಯಂ:** (Colloquium)

ನೋಂದಣಿ ಪೂರ್ವ ಕೊಲೋಕಿಯಂಯನ್ನು ಏರ್ಪಾಡು ಮಾಡಲಾಗುವುದು. ಇದರಲ್ಲಿ ಅಭ್ಯರ್ಥಿಯ ಸಿದ್ದತೆಯನ್ನು ಪರೀಕ್ಷಿಸಲಾಗುವುದು. ಇದನ್ನು ಅಧ್ಯಯನ ಸಭೆಯ ಶಿಫಾರಸ್ಸಿಗೆ ಕಳುಹಿಸಲಾಗುವುದು. ಸಮಿತಿಯು ಮಾರ್ಗದರ್ಶಕರೊಂದಿಗೆ ಚರ್ಚಿಸಿ ಶೀರ್ಷಿಕೆ, ವ್ಯಾಪ್ತಿ ಮತ್ತು ಸಂಶೋಧನಾ ವಿಧಾನದ ಬಗ್ಗೆ ಬದಲಾವಣೆಯನ್ನು ಸೂಚಿಸಬಹುದು.

**7.8 ತಾತ್ಕಾಲಿಕ ನೋಂದಣಿ:**

ಒಂದು ವೇಳೆ ಸಂಶೋಧನಾ ಸಲಹಾ ಸಮಿತಿಗೆ ವಿದ್ಯಾರ್ಥಿಯ ಸಾಧನೆ ತೃಪ್ತಿ ತರದಿದ್ದರೆ ಮೂರು ತಿಂಗಳೊಳಗಾಗಿ ಮತ್ತೊಮ್ಮೆ ಕೊಲೋಕಿಯಂನಲ್ಲಿ ಮಂಡಿಸಬೇಕು. ಆಗಲೂ ಸಂಶೋಧನಾ ಸಲಹಾ ಸಮಿತಿಗೆ ವಿದ್ಯಾರ್ಥಿಯ ಸಾಧನೆ ತೃಪ್ತಿ ತರದಿದ್ದರೆ ಆ ಆಭ್ಯರ್ಥಿಯು ತಾತ್ಕಾಲುಕ ನೋಂದಣಿಗೆ ಅರ್ಹರಾಗುವುದಿಲ್ಲ

ಇದರ ಯಶಸ್ವಿಯಾದ ನಂತರ ಅಭ್ಯರ್ಥಿಗಳು ಇನ್ನೊಂದು ಅರ್ಜಿ (ಅರ್ಜಿ–ಬಿ) ಅನ್ನು ಸಂಶೋಧನಾ ಪ್ರಸ್ತಾವನೆ ಜೊತೆ ಸಂಬಂದ ಪಟ್ಟ ಪಿ.ಜಿ. ವಿಭಾಗಕ್ಕೆ ತಾತ್ಕಾಲಿಕ ನೋಂದಣಿಗಾಗಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸಬೇಕು. ಈ ಶುಲ್ಕದಲ್ಲಿ ತಾತ್ಕಾಲಿಕ ನೋಂದಣಿ ಶುಲ್ಕ, ಗ್ರಂಥಾಲಯ ಶುಲ್ಕ, ಕೋರ್ಸ್ ವರ್ಕ್ ಶುಲ್ಕ ಮತ್ತು ವಿಜ್ಞಾನದ ವಿದ್ಯಾರ್ಥಿಗಳಿಗೆ ಲ್ಯಾಬ್ ಶುಲ್ಕ ಸೇರಿರುತ್ತದೆ.

**7.9 ಕೋರ್ಸ್ ವರ್ಕ್**

ಪಿಹೆಚ್.ಡಿ ಕಾರ್ಯಕ್ರಮದ ಕೋರ್ಸ್ ವರ್ಕ್‌ನಲ್ಲಿ 3 ಪತ್ರಿಕೆಗಳಿದ್ದು ಪ್ರತಿಯೊಂದಕ್ಕೂ 100 ಅಂಕಗಳಿರುತ್ತವೆ.

| ಕ್ರಮ ಸಂ | ಕೋರ್ಸ್ ಶೀರ್ಷಿಕೆ | ಕಲಿಕಾ ಅವಧಿ | ಕ್ರೆಡಿಟ್ | ಅಂತರಿಕ ಅಂಕಗಳು | ಪರೀಕ್ಷೆ | ಒಟ್ಟು ಅಂಕ |
|---|---|---|---|---|---|---|
| 1 | ಸಂಶೋಧನಾ ಕ್ರಮ (Research Methodolgy) | 30 | 06 | 25 | 75 | 100 |
| 2 | ಪ್ರಮುಖ ವಿಷಯ (Cognate Subject) | 30 | 04 | 25 | 75 | 100 |
| 3 | ವಿಶೇಷ ಪತ್ರಿಕೆ (Specialization Paper) | 30 | 06 | 25 | 75 | 100 |

ಅಭ್ಯರ್ಥಿಯು ಕನಿಷ್ಠ ಶೇ 75 ಹಾಜರಾತಿ ಹೊಂದಿರಬೇಕು. ಇಲ್ಲವಾದಲ್ಲಿ ಅವರು ಕೋರ್ಸ್ ವರ್ಕ್‌ನಲ್ಲಿ ಅರ್ಹರಾಗಿಲ್ಲ ಎಂದು ತಾತ್ಕಾಲಿಕ ನೋಂದಣಿಯು ರದ್ದಾಗುತ್ತದೆ.

**ಶಿಕ್ಷಣ ಕ್ರಮಗಳ ಶ್ರೇಯಾಂಕ ಪದ್ಧತಿ**

ವಿಶ್ವವಿದ್ಯಾನಿಲಯವು ತನ್ನ ಶಿಕ್ಷಣ ಕ್ರಮಗಳಿಗೆ ಶ್ರೇಯಾಂಕ ಪದ್ಧತಿಯನ್ನು ಅನುಸರಿಸುತ್ತಿದೆ. ಪ್ರತಿ ಶ್ರೇಯಾಂಕವು 30 ಗಂಟೆಗಳ ಅಧ್ಯಯನ ಅವಧಿಯನ್ನು ಹೊಂದಿದ್ದು, ಇದರಲ್ಲಿ ಕಲಿಕಾ ಚಟುವಟಿಕೆಗಳು ಅಂದರೆ ಸ್ವಕಲಿಕಾ ಸಾಮಗ್ರಿಯನ್ನು ಅಧ್ಯಯನ ಮಾಡುವುದು, ಸಮಾಲೋಚನ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಸಂಪರ್ಕ ಕಾರ್ಯಕ್ರಮಗಳಿಗೆ ಹಾಜರಾಗುವುದು. ನಿಬಂಧಗಳನ್ನು ಬರೆಯುವುದು, ಗ್ರಂಥಾಲಯ / ಶಿಕ್ಷಣ ಸಂಸ್ಥೆಗಳಿಗೆ/ ಕೈಗಾರಿಕೆಗಳಿಗೆ ಭೇಟಿ ನೀಡುವುದು, ದೃಶ್ಯ–ಶ್ರವ್ಯ ಮಾಧ್ಯಮದಲ್ಲಿರುವ ಕಲಿಕಾ ಸಾಮಗ್ರಿಗಳೊಡನೆ ಸಂವಹಿಸುವುದು, ಪರೀಕ್ಷೆಗಳಿಗೆ ಸಿದ್ಧರಾಗುವುದನ್ನು ಒಳಗೊಂಡಿದೆ. ನಾಲ್ಕು ಶ್ರೇಯಾಂಕದ ಪತ್ರಿಕೆಯು 120 ಗಂಟೆಗಳ ಅಧ್ಯಯನ ಅವಧಿಯನ್ನು ಒಳಗೊಂಡಿದೆ. ಆರು ಶ್ರೇಯಾಂಕದ ಪತ್ರಿಕೆಯು 180 ಗಂಟೆಗಳ ಅಧ್ಯಯನ ಗಂಟೆಗಳನ್ನು ಹೊಂದಿದೆ. ಈ ಶ್ರೇಯಾಂಕ ಪದ್ಧತಿಯು ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಪ್ರಯತ್ನಗಳು ಎಷ್ಟು ಅವಧಿಯದ್ದಾಗಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಕರಿಸುತ್ತದೆ. ಹಾಗೂ ತಮ್ಮ ಶಿಕ್ಷಣ ಕ್ರಮವನ್ನು ಫಲಪ್ರದವಾಗಿ ಪೂರ್ಣಗಳಿಸಲು ಸನ್ನದ್ದುಗೊಳಿಸುತ್ತದೆ.

**7.10 ಕೋರ್ಸ್ ವರ್ಕ್ ಪರೀಕ್ಷೆ**

ಅಭ್ಯರ್ಥಿಯ ಕೋರ್ಸ್ ವರ್ಕ್‌ನಲ್ಲಿ ಅರ್ಹತೆಯನ್ನು ಎರಡು ವಿಧದಲ್ಲಿ ಪರೀಕ್ಷಿಸಲಾಗವುದು

1. ಅಂತರಿಕ ಮೌಲ್ಯಮಾಪನ
2. ಬಾಹ್ಯ ಮಾಲ್ಯಮಾಪನ

**ಅಂತರಿಕ ಮೌಲ್ಯಮಾಪನ**

ಪ್ರತಿ ಪತ್ರಿಕೆಯಲ್ಲೂ

- ಹಾಜರಾತಿ: 5 ಅಂಕಗಳು
- ವಿಚಾರ ಮಂಡನೆ (Presentation) : 5 ಅಂಕಗಳು
- ಸಾಹಿತ್ಯ ಪರಾಮರ್ಶೆಯ ಮೇಲಿನ ನಿಂಬಂಧ: 5 ಅಂಕಗಳು
- ಅಂತರಿಕ ಪರೀಕ್ಷೆ (Test): 10 ಅಂಕಗಳು

ಒಟ್ಟು 25 ಅಂಕಗಳಿಗೆ ಅಂತರಿಕ ಮೌಲ್ಯಮಾಪನ ಮಾಡಲಾಗುವುದು.

**ಬಾಹ್ಯ ಮಾಲ್ಯಮಾಪನ:**

- ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ಅಧಿಸೂಚನೆ ನಂತರ ಕೋರ್ಸ್ ವರ್ಕ್ ಪರೀಕ್ಷೆಗೆ ನಿಗದಿತ ಶುಲ್ಕ ಸಲ್ಲಿಸಿ ಅರ್ಜಿ ಸಲ್ಲಿಸಬೇಕು.
- ಬಾಹ್ಯ ಮಾಲ್ಯಮಾಪನದಲ್ಲಿ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆ (Viva voce) ಇರುತ್ತದೆ.
- ಪ್ರತಿ ಪತ್ರಿಕೆಯಲ್ಲಿ ತೇರ್ಗಡೆಯಾಗಲು ಕನಿಷ್ಠ ಶೇ 40 ಅಂಕ ಹಾಗು ಅಂತರಿಕ ಅಂಕಗಳನ್ನು ಒಳಗೊಂಡಂತೆ ಕನಿಷ್ಠ ಶೇ 55 ಅಂಕ ಪಡೆಯಬೇಕು.
- ಇದರ ನಂತರ 50 ಅಂಕಗಳಿಗೆ ಮೌಖಿಕ ಪರೀಕ್ಷೆ ಇರುತ್ತದೆ. ಅದಕ್ಕೆ ಯಾವುದೇ ಕನಿಷ್ಠ ಅಂಕ ಇರುವುದಿಲ್ಲ

- ಆದರೆ ಪ್ರತಿಯೊಬ್ಬ ಅಭ್ಯರ್ಥಿಯೂ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಲೇಬೇಕು. ಇವುಗಳ ಅಧಾರದ ಮೇಲೆ ಪಲಿತಾಂಶವನ್ನು ಪ್ರಕಟಿಸಲಾಗುವುದು.
- ಸರಾಸರಿ ಶೇ 55 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಯನ್ನು ಉತ್ತೀರ್ಣನಾಗಿದ್ದಾರೆಯೆಂದು ಘೋಷಿಸಲಾಗುವುದು. ಅದಕ್ಕಿಂತ ಕಡಿಮೆ ಅಂಕ ಪಡೆದವರು ಅರ್ಹರಲ್ಲ.
- ಅರ್ಹರಾಗದವರಿಗೆ ಮೊದಲ ಪರೀಕ್ಷೆ ಆದ 3 ತಿಂಗಳ ಒಳಗೆ ಒಂದು ಬಾರಿ ಉತ್ತಮಿಕೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದು. ಮೊದಲ ಬಾರಿ ತೇರ್ಗಡೆ ಆದ ಪತ್ರಿಕೆಗಳಲ್ಲಿ ವಿನಾಯಿತಿ ನೀಡಲಾಗುವುದು. ಒಂದು ವೇಳೆ ಆಗಲೂ ಅಭ್ಯರ್ಥಿಯು ಉತ್ತೀರ್ಣರಾಗದಿದ್ದಲ್ಲಿ ಅವರ ತಾತ್ಕಾಲಿಕ ನೋಂದಣಿಯನ್ನು ರದ್ದುಗೊಳಿಸಲಾಗುವುದು
- ಎಲ್ಲಾ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅಂಕಪಟ್ಟಿ ನೀಡಲಾಗುವುದು.
- ಪರೀಕ್ಷಾ ಅವಧಿ: ಪ್ರತಿ ಪತ್ರಿಕೆಗೆ 3 ಗಂಟೆಗಳು

7.11 **ಪಿಹೆಚ್.ಡಿ ನೋಂದಣಿ:**

ಪಲಿತಾಂಶ ಘೋಷಣೆ ಆದ ನಂತರ ತೇರ್ಗಡೆಯಾದ ಅಭ್ಯರ್ಥಿಗಳು ಮತ್ತೊಂದು ಅರ್ಜಿಯನ್ನು (ಅರ್ಜಿ ಸಿ) ವಿಭಾಗದ ಮೂಲಕ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕದೊಂದಿಗೆ (ನೋಂದಣಿ ಶುಲ್ಕ ಮತ್ತು ಭೋದನಾ ಶುಲ್ಕ) ನೋಂದಣಿ ಖಚಿತ ಪಡಿಸಿಕೊಳ್ಳಲು ಸಲ್ಲಿಸಬೇಕು.

## 8.0 ನೋಂದಣಿ ನಂತರದ ಹಂತಗಳು

### 8.1 ಸಂಶೋಧನಾ ಕಾರ್ಯ ಮತ್ತು ಫೀಲ್ಡ್ ವರ್ಕ್

ವಿದ್ಯಾರ್ಥಿಗಳು ಸಂಶೋಧನಾ ಕಾರ್ಯ ಮತ್ತು ಕ್ಷೇತ್ರ ಕಾರ್ಯವನ್ನು ಸಂಶೋಧನಾ ಯೋಜನೆಯಂತೆ ಸಂಶೋಧನಾ ಮಾರ್ಗದರ್ಶಕರ ಮಾರ್ಗದರ್ಶನದಂತೆ ನಿರ್ವಹಿಸಬೇಕು.

### 8.2 ಪ್ರಗತಿ ವರದಿ

ವಿದ್ಯಾರ್ಥಿಗಳು ಸಂಶೋಧನಾ ಕಾರ್ಯವನ್ನು ಪ್ರಗತಿ ವರದಿಗಳ ಮೂಲಕ ಪರಿಶೀಲಿಸಲಾಗುವುದು. ವಿದ್ಯಾರ್ಥಿಗಳು ಪ್ರತಿ ಆರು ತಿಂಗಳಿಗೊಮ್ಮೆ ತಮ್ಮ ಸಂಶೋಧನಾ ಪ್ರಗತಿಯ ಬಗ್ಗೆ ಮಾರ್ಗದರ್ಶಕರ ಶಿಫಾರಸ್ಸಿನೊಂದಿಗೆ ಸಲ್ಲಿಸಬೇಕು. (ಅನುಬಂಧ– 3)

### 8.3 ವಾರ್ಷಿಕ ವಿಚಾರ ಮಂಡನೆ (Annual Presentation):

ಸಂಶೋಧನಾ ಸಲಹಾ ಸಮಿತಿಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಮಾರ್ಗದರ್ಶಕರು ವರ್ಷಕೊಮ್ಮೆ ಅಯೋಜಿಸುವ ಸಭೆಯಲ್ಲಿ ವಿದ್ಯಾರ್ಥಿಯು ಹಾಜಾರಾಗಿ ತನ್ನ ಸಂಶೋಧನಾ ಕಾರ್ಯದ ಪ್ರಗತಿಯನ್ನು ಪ್ರಸ್ತುತ ಪಡಿಸಬೇಕು ಮತ್ತು ಮುಂದಿನ ಹಂತಗಳ ಬಗ್ಗೆ ಸಲಹೆ ಪಡೆಯಬೇಕು. ಹಾಗೂ ಮುಂದಿನ ಒಂದು ವರ್ಷದ ಸಂಶೋಧನಾ ಯೋಜನೆಯನ್ನು ಪ್ರಸ್ತುತ ಪಡಿಸಬೇಕು. ನಿಗದಿತ ಭೋಧನಾ ಮತ್ತು ಲ್ಯಾಬ್ ಶುಲ್ಕವನ್ನು ವರ್ಷಕ್ಕೆ ಒಂದು ಸಾರಿ ಪಾವತಿಸಬೇಕು. ಅದರ ಚಲನ್ ಅನ್ನು ಆ ವರ್ಷದ ಪ್ರಗತಿ ವರದಿಯ ಜೊತೆ ಸಲ್ಲಿಸಬೇಕು.

### 8.4 ಪಾರ್ಟ್ ಟೈಮ್‌ನಿಂದ ಫುಲ್ ಟೈಮ್ ಗೆ ಹಾಗೂ ಫುಲ್ ಟೈಮ್‌ನಿಂದ ಪಾರ್ಟ್ ಟೈಮ್‌ಗೆ ಬದಲಾವಣೆ

ಒಬ್ಬ ಪಾರ್ಟ್ ಟೈಮ್ ವಿದ್ಯಾರ್ಥಿ ಫುಲ್ ಟೈಮ್‌ಗೆ ಅರ್ಹ ಕಾರಣಗಳಿದ್ದರೆ ಬದಲಾಯಿಸಬಹುದು. ಅಂಥಹ ನೋಂದಣಿ, ಬದಲಾಯಿಸಿದ ದಿನದಿಂದ ಮೂರು ವರ್ಷಕ್ಕೆ ಅಥವಾ ನೋಂದಣಿ ಆದ ದಿನದಿಂದ ನಾಲ್ಕು ವರ್ಷಕ್ಕೆ ಸಿಂಧು ಆಗಿರುತ್ತದೆ.

ಒಬ್ಬ ಫುಲ್ ಟೈಮ್ ವಿದ್ಯಾರ್ಥಿ ಪಾರ್ಟ್ ಟೈಮ್‌ಗೆ ಬದಲಾಯಿಸಬಹುದು. ಅಂಥಹ ನೋಂದಣಿ ಬದಲಾಯಿಸಿದ ದಿನದಿಂದ ಮೂರು ವರ್ಷಕ್ಕೆ ಅಥವಾ ನೋಂದಣಿ ಆದ ದಿನದಿಂದ ನಾಲ್ಕು ವರ್ಷಕ್ಕೆ ಸಿಂಧು ಆಗಿರುತ್ತದೆ.

**8.5 ಅಂತಿಮ ಸಾರಲೇಖ ಸಲ್ಲಿಕೆ**

ಸಂಶೋಧನಾ ಕಾರ್ಯ ಮುಗಿದ ನಂತರ ವಿಶ್ವವಿದ್ಯಾನಿಲಯದ ಅನುಮತಿ ಪಡೆದು ವಿದ್ಯಾರ್ಥಿಯು ಅಂತಿಮ ಸಾರಲೇಖ ಸಲ್ಲಿಸಬಹುದು. ವಿದ್ಯಾರ್ಥಿಯು ಅಂತಿಮ ಸಾರಲೇಖದ 15 ಪ್ರತಿಗಳನ್ನು ವಿಭಾಗದ ಮುಖ್ಯಸ್ಥರ ಮೂಲಕ ಡೀನ್ (ಶೈ) ಅವರಿಗೆ ಸಲ್ಲಿಸಬೇಕು, ಅದು ಮಹಾಪ್ರಬಂಧದ ಮುಖ್ಯಾಂಶಗಳು ಒಳಗೊಂಡಿರಬೇಕು. ವಿದ್ಯಾರ್ಥಿಯು ಪೀರ್ ರಿವ್ಯೂಡ್ ನಿಯತಕಾಲಿಕೆಗಳಲ್ಲಿ ಒಂದಾದರೂ ಮೊದಲ ಸಂಶೋಧಕರಾಗಿ ಪಿಹೆಚ್.ಡಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸದಂತೆ ಸಂಶೋಧನಾ ಲೇಖನವನ್ನು ಪ್ರಕಟಿಸಿರಬೇಕು. ಹಾಗೂ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಕನಿಷ್ಟ ಎರಡಾದರೂ ಪತ್ರಿಕೆಯನ್ನು ಮಂಡಿಸರಬೇಕು.

**8.6 ಸಲ್ಲಿಕೆ ಪೂರ್ವ ಕೊಲೋಕಿಯಂ**

ಮುಂದುವರೆದು ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿ ಕೇಳಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಯು ಸಲ್ಲಿಕೆಗೆ ಮುನ್ನ ಸಲ್ಲಿಕೆ ಪೂರ್ವ ಕೊಲೋಕಿಯಂನಲ್ಲಿ ಅವರ ಸಿದ್ದತೆಯನ್ನು ಮಂಡಿಸಬೇಕು. ಸಲ್ಲಿಕೆ ಪೂರ್ವ ಕೊಲೋಕಿಯಂನಲ್ಲಿ ಅವರ ಕಾರ್ಯ ನಿರ್ವಹಣೆಯನ್ನು ಮತ್ತು ಅವರ ಸಂಶೋಧನಾ ಕಾರ್ಯವನ್ನು ಗಮನಿಸಿ ವಿದ್ಯಾರ್ಥಿಗೆ ಮಹಾಪ್ರಬಂಧ ಸಲ್ಲಿಸಲು ಅನುಮತಿ ನೀಡಬಹುದಾಗಿದೆ.

ಒಂದು ವೇಳೆ ಸಂಶೋಧನಾ ಸಲಹಾ ಸಮಿತಿಗೆ ವಿದ್ಯಾರ್ಥಿಯ ಸಿದ್ದತೆ ತೃಪ್ತಿ ತರದಿದ್ದರೆ ಒಂದು ತಿಂಗಳ ಅವಧಿಯೊಳಗೆ ಮತ್ತೊಮ್ಮೆ ಕೊಲೋಕಿಯಂನಲ್ಲಿ ಮಂಡಿಸಲು ಅವಕಾಶ ನೀಡಲಾಗುವುದು. ಮತ್ತು ಇದನ್ನು ವಿಭಾಗದ ಮುಖ್ಯಸ್ಥರು ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕು. ಸಂಶೋಧನಾ ಸಲಹಾ ಸಮಿತಿಯು ವಿದ್ಯಾರ್ಥಿಗೆ ಸಲಹೆ ಸೂಚನೆಗಳನ್ನು ನೀಡಬಹುದು.

**8.7 ಮಹಾಪ್ರಬಂಧವನ್ನು ಸಲ್ಲಿಸಲು ಮಾರ್ಗಸೂಚಿಗಳು**

ಎಲ್ಲಾ ವಿದ್ಯಾರ್ಥಿಗಳು ಮಹಾಪ್ರಬಂಧವನ್ನು ಸಿದ್ದಪಡಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಗಮನಿಸಬೇಕು

- ಮಹಾಪ್ರಬಂಧದ ಮೊದಲ ವಿಭಾಗದಲ್ಲಿ ಸಾರಾಂಶವನ್ನು ಸೇರಿಸಬೇಕು.
- ಪ್ರಮಾಣಪತ್ರದ ನಂತರ ಸಾರಾಂಶವನ್ನು ಸೇರಿಸಬೇಕು. ಅದು ಉಳಿದ ಬಾಗಗಳ ಶೈಲಿಯಲ್ಲೇ ಇರಬೇಕು.
- ಸಾರಾಂಶವು ಮಹಾಪ್ರಬಂಧದ ಮುಖ್ಯಾಂಶಗಳು ಒಳಗೊಂಡಿರಬೇಕು.
- ಲೇಖನ ಪ್ರಕಟಿಸಿದ್ದರ ದಾಖಲೆ: ಮಹಾಪ್ರಬಂಧದ ಕೊನೆಯಲ್ಲಿ ಪ್ರಕಟಗೊಂಡ ಲೇಖನದ ಪ್ರತಿ ಅಥವಾ ಲೇಖನ ಸ್ವೀಕೃತ ಪತ್ರ ಲಗತ್ತಿಸಬೇಕು.
- ಮಹಾಪ್ರಬಂಧದ ಸಾಫ್ಟ್ ಕಾಪಿಯನ್ನು ಪಿಡಿಎಫ್ ರೂಪದಲ್ಲಿ ಸಿಡಿಯಲ್ಲಿ ಸಲ್ಲಿಸಬೇಕು. ವಿದ್ಯಾರ್ಥಿಯು ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕು. ಪ್ರಮಾಣಪತ್ರ ಮತ್ತು ಘೋಷಣೆಯು ವಿಶ್ವವಿದ್ಯಾನಿಲಯ ನಿಗದಿಸಿ ಪಡಿಸಿರುವ ನಮೂನೆಯಲ್ಲಿ ಇರಬೇಕು.
- ಉತ್ತಮ ಗುಣಮಟ್ಟದ ಕಾಗದ ಉಪಯೋಗಿಸಬೇಕು. ಅದರೆ ಪ್ರತಿಗಳು ಸಹಾ ಯಾವುದೇ ಕಲೆ, ಗುರುತುಗಳು ಇಲ್ಲದೇ ಓದುವಂತಿರಬೇಕು. ಪ್ರತಿಗಳು A4 ಕಾಗದದಲ್ಲಿದ್ದು ಒಂದೇ ಭಾಗದಲ್ಲಿ ಮುದ್ರಿತವಾಗಿರಬೇಕು.
- ಅಕ್ಷರಗಳ ಗಾತ್ರ 12 ಅಥವಾ ಹೆಚ್ಚರಬೇಕು. ಹೆಚ್ಚಿನ ವಿನ್ಯಾಸಗಳುಳ್ಳ ಅಕ್ಷರ ಶೈಲಿಗಳನ್ನು ಉಪಯೋಗಿಸಬಾರದು.

- ಮಾರ್ಜಿನ್: ಬೈಡಿಂಗ್ ಮಾಡುವ ಕಡೆ 1.5 ಇಂಚ್ ಮಾರ್ಜಿನ್ ಬಿಡಬೇಕು. ಮಿಕ್ಕ ಕಡೆ 1 ಇಂಚ್ ಮಾರ್ಜಿನ್ ಬಿಡಬೇಕು. ಹೆಡರ್ ಮತ್ತು ಫೂಟರ್‌ಗಳೂ ಸಹಾ ಮಾರ್ಜಿನ್ ಮಿತಿಯಲ್ಲಿ ಬರಬೇಕು
- ಸ್ಥಳ ಖಾಲಿ ಬಿಡುವಿಕೆ: ಸಾಲುಗಳ ಮದ್ಯ 1.5 ಲೈನ್ ಸ್ಪೇಸಿಂಗ್ ಬಿಡಬೇಕು. ಅಂತಿಮ ಪ್ರತಿಗಳು ಸ್ಪಷ್ಟವಾಗಿ ಅಕರ್ಷಕವಾಗಿ ಇರಬೇಕು. ಪ್ರತಿಯೊಂದು ಪ್ರತಿಯಲ್ಲೂ ಹಾಳೆಗಳು ಬಿಟ್ಟು ಹೋಗಿರುವುದಿಲ್ಲದ್ದನ್ನು ಖಚಿತ ಪಡಿಸಿಕೊಳ್ಳಲು, ಸ್ಪಷ್ಟತೆಗಾಗಿ ಪರೀಕ್ಷಿಸಬೇಕು.

## 8.8 ನಕಲು ಪರೀಕ್ಷೆಗಾಗಿ ಮಹಾಪ್ರಬಂಧ ಸಲ್ಲಿಕೆ

ಸಲ್ಲಿಕೆ ಪೂರ್ವ ಕೊಲಜಿಯಂ ನಂತರ ಆರು ತಿಂಗಳೊಳಗಾಗಿ ವಿಶ್ವವಿದ್ಯಾನಿಲಯದ ಅನುಮತಿಯೊಂದಿಗೆ ಮಹಾಪ್ರಬಂಧವನ್ನು ಸಾಫ್ಟ್ ಕಾಪಿಯ ಜೊತೆಗೆ ನಕಲು ಪರೀಕ್ಷೆಗಾಗಿ ಸಲ್ಲಿಸಬೇಕು . ಇಲ್ಲವಾದಲ್ಲಿ ಮತ್ತೊಮ್ಮೆ ಸಲ್ಲಿಕೆ ಪೂರ್ವ ಕೊಲಜಿಯಂಗೆ ಹಾಜರಾಗಿ ಅನುಮತಿ ಪಡೆಯಬೇಕು. ಮಹಾಪ್ರಬಂಧವು ಕಡ್ಡಾಯವಾಗಿ ನಕಲು ಪರೀಕ್ಷೆ ( ಪ್ಲಗಾರಿಜಂ ಪರೀಕ್ಷೆ) ಗೆ ಕೆಳಕಂಡಂತೆ ಒಳಪಡಿಸಬೇಕು

- ಎಲ್ಲಾ ಉಲ್ಲೇಖ ಮತ್ತು ಅನುಬಂಧಗಳೊಡನೆ ಮಹಾಪ್ರಬಂಧದ ಸಾಫ್ಟ್ ಕಾಪಿ ವರ್ಡ್ ಅಥವಾ ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು ಇದರಲ್ಲಿ ಮೊದಲಿನ ಪುಟಗಳು, ಘೋಷಣೆ, ಪ್ರಮಾಣಪತ್ರ, ಅರಿಕೆ (acknowledgement) , ಸಾರಾಂಶ, ಪರಿವಿಡಿ, ಅರ್ಥಕೋಶ, ಪ್ರಶ್ನಾವಳಿ, ಚಾರ್ಟ್‌ಗಳ ಪಟ್ಟಿ ಇವಗಳನ್ನು ಹೊರತು ಪಡಿಸಿ ಸಲ್ಲಿಸಬೇಕು. ಇದಕ್ಕಾಗಿ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದು ಸಲ್ಲಿಸಬೇಕು.
- ಶೋಧಗಂಗಾ ಪ್ರಾಜೆಕ್ಟ್ ಮತ್ತು ಇನ್‌ಫ್ಲಿಬ್‌ನೆಟ್ ಮೂಲಕ ಗ್ರಂಥಾಲಯವು ಆಂಟಿ ಪ್ಲಗಾರಿಜಂ ಸಾಫ್ಟವೇರ್ ಅನ್ನು ನೀಡುತ್ತದೆ. ಯುಜಿಸಿ ಇನ್‌ಫಿಬ್‌ನೆಟ್ ಮೂಲಕ ಕಾಲಕಾಲಕ್ಕೆ ಬದಲಾಗುವ ನಿರ್ದಿಷ್ಟ ಸಾಫ್ಟ್ ವೇರ್ ಅನ್ನು ಪಡೆಯಬಹುದು
- ಪ್ರಬಂಧವನ್ನು ಪರೀಕ್ಷಿಸಿದಾಗ ಶೇ 25ರಷ್ಟು ಸಾಮ್ಯತೆಯನ್ನು ಒಪ್ಪಬಹುದು. ಮಾರ್ಗದರ್ಶಕರು ಪ್ರಕಟಿಸಿರುವ ಲೇಖನಗಳಿದ್ದರೆ ಇನ್ನೂ ಶೇ 5 ರಷ್ಟು ಸಾಮ್ಯತೆಯನ್ನು ಒಪ್ಪಬಹುದು. ಇದಕ್ಕೆ ಮಾರ್ಗದರ್ಶಕರು ಪ್ರಕಟಿಸಿದ ಲೇಖನದ ಪ್ರತಿ ಹಾಗು ಮೂಲ ಲೇಖನ ಎಂಬ ದೃಡೀಕರಣ ನೀಡಬೇಕು
- ನಕಲು ಪರೀಕ್ಷೆಯ ಪಲಿತಾಂಶವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ಮತ್ತೆ ಮತ್ತೆ ಸಲ್ಲಿಸಿದಾಗ ಶುಲ್ಕ ಹೆಚ್ಚಳವಾಗುವುದು
- ಒಂದು ವೇಳೆ ನಕಲು ಮಾಡಿದ್ದು ಸಾಬೀತಾದಲ್ಲಿ ಮಾರ್ಗದರ್ಶಕರು ಹಾಗೂ ವಿದ್ಯಾರ್ಥಿಗೆ ನೋಟೀಸ್ ನೀಡಲಾಗುವುದು. ಇದರ ಮೇಲೆ ಸರಿಯಾದ ಕ್ರಮ ಕೈಗೊಳ್ಳಲು ಮಾರ್ಗದರ್ಶಕರು ಹಾಗೂ ವಿದ್ಯಾರ್ಥಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲಾಗುವುದು.

## 8.9 ಮಹಾಪ್ರಬಂಧ (Thesis) ಸಲ್ಲಿಕೆ

- ಒಮ್ಮೆ ಕಡ್ಡಾಯ ನಕಲು ಪರೀಕ್ಷೆ ಮುಗಿದ ಮೇಲೆ ವಿದ್ಯಾರ್ಥಿಯು ಮಹಾಪ್ರಬಂಧದ 5 ಪ್ರತಿಗಳನ್ನು ಸಲ್ಲಿಸಬೇಕು. ಇದರ ಜೊತೆಗೆ ಅಂತಿಮ ಸಾರಲೇಖದ 5 ಪ್ರತಿಗಳು ಹಾಗೂ ಸಾಫ್ಟ್ ಕಾಪಿ 3 ಸಿಡಿಗಳನ್ನು ಪಿಡಿಎಫ್ ರೂಪದಲ್ಲಿ ಪರೀಕ್ಷಾಂಗ ಕುಲಸಚಿವರಿಗೆ ಮೌಲ್ಯಮಾಪನಕ್ಕಾಗಿ ಸಲ್ಲಿಸಬೇಕು.

- ಮಹಾಪ್ರಬಂಧದ ಜೊತೆ ವಿಭಾಗದ ಮುಖ್ಯಸ್ಥರಿಂದ, ಗ್ರಂಥಾಲಯ ಮತ್ತು ಇನ್ನಿತರ ಸಂಬಂಧಪಟ್ಟ ವಿಭಾಗಗಳಿಂದ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸಬೇಕು.
- ಆರು ತಿಂಗಳೊಳಗೆ ಮಹಾಪ್ರಬಂಧ ಸಲ್ಲಿಸದೇ ಇದ್ದಲ್ಲಿ ನೋಂದಣಿಯು ರದ್ದಾಗುವುದು. ಮಹಾಪ್ರಬಂಧದಲ್ಲಿ ನಕಲು ಪರೀಕ್ಷೆಯ ಫಲಿತಾಂಶವನ್ನು ಸೇರಿಸಬೇಕು. ಮಹಾಪ್ರಬಂಧ ಸಲ್ಲಿಸಿದ ಮೇಲೆ ಕುಲಸಚಿವ ಪರೀಕ್ಷಾಂಗರಿಂದ ಮಹಾಪ್ರಬಂಧ ಸಲ್ಲಿಕೆ ಪ್ರಮಾಣಪತ್ರ ಪಡೆಯಬಹುದಾಗಿದೆ.
- ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಎರಡು ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವುದರ ಬಗ್ಗೆ ಮಾರ್ಗದರ್ಶಕರಿಂದ ಪ್ರಮಾಣ ಪತ್ರ ಸಲ್ಲಿಸಬೇಕು.
- ಮಹಾಪ್ರಬಂದದಲ್ಲಿ ಇದು ಮೂಲ ಕೃತಿ ಎಂಬುದರ ಬಗ್ಗೆ ಮಾರ್ಗದರ್ಶಕರಿಂದ ಪ್ರಮಾಣ ಪತ್ರ ಸಲ್ಲಿಸಬೇಕು. ಈ ಮಹಾ ಪ್ರಬಂಧವನ್ನು ಬೇರೆ ಯಾವುದೇ ಅಥವಾ ಇದೇ ಸಂಸ್ಥೆಗೆ ಯಾವುದೇ ಬೇರೆ ಪದವಿ/ಡಿಪ್ಲೊಮಾ ಪಡೆಯಲು ಸಲ್ಲಿಸಿಲ್ಲ ಎಂದು ಪ್ರಮಾಣಪತ್ರ ಸಲ್ಲಿಸಬೇಕು.
- ಒಂದು ವೇಳೆ ಪ್ರಬಂಧವು ನಕಲು ಎಂದು ಸಾಬೀತಾದಲ್ಲಿ ವಿಶ್ವವಿದ್ಯಾನಿಲಯವು ಪದವಿಯನ್ನು ಹಿಂಪಡೆಯುವುದು.

### 8.10 ಮಹಾಪ್ರಬಂಧದ ಮೌಲ್ಯ ಮಾಪನ

ವಿದ್ಯಾರ್ಥಿಯು ಮಹಾಪ್ರಬಂಧವನ್ನು ಸಲ್ಲಿಸಿದ ಮೇಲೆ ಅದನ್ನು ಮೌಲ್ಯಮಾಪನಕ್ಕಾಗಿ ಕುಲಸಚಿವ ಪರೀಕ್ಷಾಂಗರಿಗೆ ಮೌಲ್ಯಮಾಫನಕ್ಕಾಗಿ ಕಳುಹಿಸಿಕೊಡಲಾಗುವುದು

### 8.11 ಮಹಾಪ್ರಬಂಧದ ಪುನರ್ ಸಲ್ಲಿಕೆ

ಒಂದು ವೇಳೇ ಪರೀಕ್ಷಕರು ಮಹಾಪ್ರಬಂದವನ್ನು ತಿದ್ದುಪಡಿ ಮಾಡಿ ಮತ್ತೆ ಸಲ್ಲಿಸಬೇಕೆಂದು ಸೂಚಿಸಿದಲ್ಲಿ ವಿದ್ಯಾರ್ಥಿಯು ಆ ತಿದ್ದುಪಡಿಗಳನ್ನು ಮಾಡಿ ಮಾರ್ಗದರ್ಶಕರಿಂದ ಪ್ರಮಾಣಿಸಿ ನಿಗದಿತ ಶುಲ್ಕದೊಂದಿಗೆ ಮತ್ತೆ ವಿಭಾಗದ ಅಧ್ಯಕ್ಷರ ಮೂಲಕ ಕುಲಸಚಿವರು ಪರೀಕ್ಷಾಂಗ ಇವರಿಗೆ ಸಲ್ಲಿಸಬೇಕು. ಈ ಅವಕಾಶವನ್ನು ಒಂದೇ ಬಾರಿ ನೀಡಲಾಗುವುದು.

### 8.12 ಮೌಖಿಕ ಪರೀಕ್ಷೆ

ಎಲ್ಲಾ ಮೌಲ್ಯಮಾಪಕರಿಂದ ತೃಪ್ತಿಕರ ವರದಿ ಬಂದ ನಂತರ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದು. ಒಂದು ವೇಳೆ ವಿದ್ಯಾರ್ಥಿಯು ಬಯಸಿದಲ್ಲಿ ಅಥವಾ ಮಾರ್ಗದರ್ಶಕರು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರದಿದ್ದಲ್ಲಿ ನಿಗದಿತ ಶುಲ್ಕ ಕಟ್ಟಿ ವಿಡಿಯೋ ಸಮ್ಮೇಳನದ ಮೂಲಕ ಮೌಖಿಕ ನಡೆಸಬಹುದು.

ಒಂದು ವೇಳೆ ವಿದ್ಯಾರ್ಥಿಯು ಮೌಖಿಕ ಪರೀಕ್ಷೆಯಲ್ಲಿ ತೃಪ್ತಿಕರವಾಗಿ ಉತ್ತರಿಸದಿದ್ದಲ್ಲಿ ಅವರಿಗೆ ಇನ್ನೊಂದು ಬಾರಿ ಹಾಜರಾಗಲು ಅವಕಾಶ ನೀಡಬಹುದು. ಮೌಖಿಕ ಪರೀಕ್ಷೆಯ ನಂತರ ಪರೀಕ್ಷಕರ ಸಲಹೆ ಹಾಗೂ ವೈವಾದ ಸಾರಾಂಶಗಳನ್ನು ಒಳಗೊಂಡಂತೆ ಮಹಾಪ್ರಬಂದವನ್ನು ತಿದ್ದಿ ಇನ್ನೆರೆಡು ಹಾರ್ಡ್ ಕಾಪಿ ಹಾಗೂ ಒಂದು ಸಾಫ್ಟ್ ಕಾಫಿಯನ್ನು ಕುಲಸಚಿವ ಪರೀಕ್ಷಾಂಗರವರಿಗೆ ಸಲ್ಲಿಸುವುದು. ಅವರು ಅದರ ಒಂದು ಪ್ರತಿಯನ್ನು ಗ್ರಂಥಾಲಯಕ್ಕೂ ಹಾಗು ಒಂದು ಪ್ರತಿಯನ್ನು ಸರ್ಕಾರಕ್ಕೂ ಕಳುಹಿಸುವುದು.

### 8.13 ಪಿಹೆಚ್.ಡಿ ಪದವಿ ಪ್ರದಾನ

ವಿದ್ಯಾರ್ಥಿಯು ಮೌಖಿಕ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದ ನಂತರ ಅವರು ಮುಂದಿನ ಘಟಿಕೋತ್ಸವದಲ್ಲಿ ಪಿಹೆಚ್.ಡಿ ಪದವಿ ಪಡೆಯಲು ಅರ್ಹರಾಗಿದ್ದಾರೆ ಎಂದು ಅಧಿಸೂಚನೆ ಹೊರಡಿಸಲಾಗುವುದು.

### 8.14 ಮಹಾಪ್ರಬಂಧದ ಪ್ರಕಟಣೆ

ಪಿಹೆಚ್.ಡಿ ಪದವಿ ಪ್ರದಾನವಾದ ನಂತರ ಸಂಪೂರ್ಣ ಪ್ರಬಂಧ ಅಥವಾ ಅದರ ಭಾಗಗಳನ್ನು ವಿಶ್ವವಿದ್ಯಾನಿಲಯದ ಲಿಖಿತ ಅನುಮತಿಯೊಂದಿಗೆ ಪ್ರಕಟಿಸಬಹುದು. ಅದರಲ್ಲಿ ಮಾರ್ಗದರ್ಶಕರಿಗೆ ಸಲ್ಲಬೇಕಾಗಿರುವ ಗೌರವವನ್ನು ನೀಡುವುದು. ಪ್ರಕಟಿತ ಕಾರ್ಯದ ಎರಡು ಪ್ರತಿಯನ್ನು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಸಲ್ಲಿಸುವುದು.

ಪಿಹೆಚ್.ಡಿ ಪದವಿ ಪ್ರದಾನವಾದ ನಂತರ ಸಂಶೋಧನಾ ಕಾರ್ಯವು ವಿಶ್ವವಿದ್ಯಾನಿಲಯದ ಸ್ವತ್ತಾಗುವುದು. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಯೊಂದಿಗೆ ಯಾವುದೇ ಕಾಪಿರೈಟ್, ಪೇಟೆಂಟ್ ಇನ್ನತರೆಗಳನ್ನು ನ್ಯಾಯಬದ್ಧವಾಗಿ ಹಂಚಿಕೊಳ್ಳುವುದು.

## 9. ತಾತ್ಕಾಲಿಕ ಶೈಕಣಿಕ ಯೋಜನೆ

ಪಿಹೆಚ್.ಡಿ ಕಾರ್ಯಕ್ರಮದ ತಾತ್ಕಾಲಿಕ ಶೈಕ್ಷಣಿಕ ಯೋಜನೆ ಕೆಳಗಿನಂತಿದೆ

| ಕ್ರಮ ಸಂಖ್ಯೆ | ಶೈಕ್ಷಣಿಕ ಚಟುವಟುಕೆ | ದಿನಾಂಕ |
|---|---|---|
| 1 | ಸಾಮಾನ್ಯ ಪ್ರವೇಶ ಪರೀಕ್ಷೆ | ಜುಲೈ ಎರಡನೇ ವಾರ |
| 2 | ಸಂದರ್ಶನ | ಆಗಸ್ಟ್ ಮೊದಲನೇ ವಾರ |
| 3 | ಸಲ್ಲಿಕೆ ಪೂರ್ವ ಕೊಲೋಕಿಯಂ | ಅಕ್ಟೋಬರ್ ಮೊದಲನೇ ವಾರ |
| 4 | ಸಾರಾಂಶ ಸಲ್ಲಿಕೆ | ಅಕ್ಟೋಬರ್ ಮೂರನೇ ವಾರ |
| 5 | ಕೋರ್ಸ್ ವರ್ಕ್ | ನವೆಂಬರ್ ಮೊದಲನೇ ವಾರ |
| 6 | ಕೋರ್ಸ್ ವರ್ಕ್ ಪರೀಕ್ಷೆ | ಮೇ ಮೊದಲನೇ ವಾರ |
| 7 | ಫಲಿತಾಂಶ ಘೋಷಣೆ | ಮೇ ಮೂರನೇ ವಾರ |
| 8 | ನೋಂದಣಿ | ಮೇ ನಾಲ್ಕನೇ ವಾರ |

## 10. ವಿದ್ಯಾರ್ಥಿ ಬೆಂಬಲ ಸೇವೆಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಸ್ನೇಹಿ ಬೆಂಬಲ ಸೇವೆಗಳನ್ನು ಸೃಜಿಸಿದೆ. ವಿದ್ಯಾರ್ಥಿ ಬೆಂಬಲ ಸೇವೆಗಳು ಯಾವುದೇ ತೊಂದರೆಗಳಿಲ್ಲದೆ ಕೇಂದ್ರ ಸ್ಥಾನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸ್ಥಾನದಲ್ಲಿ ಈ ಕೆಳಕಂಡ ಸೌಲಭ್ಯಗಳಿರುತ್ತವೆ.

- ಸುಸಜ್ಜಿತ ಉಪಹಾರ ಗೃಹ
- ಸ್ಟೇಟ್ ಬ್ಯಾಂಕ್ ಇಂಡಿಯಾ ಮತ್ತು ATM ಸೌಲಭ್ಯ
- ಅಂಚೆ ಕಚೇರಿ
- ವೈಫೈ ಸೌಲಭ್ಯ
- ಸುಸಜ್ಜಿತ, ಸುವ್ಯವಸ್ಥಿತ ಕ್ರೀಡಾಂಗಣ
- ಕುಡಿಯುವ ಶುದ್ಧ ನೀರಿನ ಘಟಕ

### ಮೈಸೂರಿನ ಕೇಂದ್ರ ಕಚೇರಿಯಲ್ಲಿರುವ ಗ್ರಂಥಾಲಯ

1996ರಿಂದಲೂ ಕರಾಮುವಿಯ ಗ್ರಂಥಾಲಯವು ವಿದ್ಯಾರ್ಥಿಗಳ, ಸಂಶೋಧಕರ, ಅಧ್ಯಾಪಕ ವರ್ಗದ ಮತ್ತು ಅಧ್ಯಾಪಕೇತರ ವರ್ಗದ ಅಗತ್ಯಗಳನ್ನು ಪೂರೈಸುತ್ತ ಬಂದಿದೆ. ಪ್ರಸ್ತುತ ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸಂಪುಟಗಳು, ಸಾಂಪ್ರದಾಯಿಕ ಪುಸ್ತಕ ಸಂಪನ್ಮೂಲಗಳು

ಇವುಗಳಲ್ಲಿ ನಿಯತಕಾಲಿಕಗಳು, ಪರಾಮರ್ಶನ ಪುಸ್ತಕಗಳು, ವಿಶ್ವಕೋಶಗಳು ಅಧ್ಯಯನ ವರದಿಗಳು ಪ್ರೌಢ ಪ್ರಬಂಧಗಳು,ನಿಬಂಧಗಳು, ದೃಕ್-ಶ್ರವ್ಯ ಸಾಮಗ್ರಿಗಳು, ಸಿಡಿ/ಡಿವಿಡಿಗಳು, ಇತ್ಯಾದಿ ಸದ್ಯ, ಗ್ರಂಥಾಲಯವು 300 ರಾಷ್ಟ್ರೀಯ, ಅಂತರಾಷ್ಟ್ರೀಯ ಜರ್ನಲ್‌ಗಳನ್ನು ಹೊಂದಿದೆ. ಗ್ರಂಥಾಲಯವು ಈಗಿರುವ ಡಿಜಿಟಲ್ ಲೈಬ್ರರಿಯನ್ನು ಉತ್ತಮ ಪಡಿಸುವ ಪ್ರಯತ್ನ ಮಾಡುತ್ತಿದೆ.

**ಸದಸ್ಯತ್ವ ಮತ್ತು ಎರವಲು ಚೀಟಿ:**

- ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ನಂತರ ವಿತರಿಸಲ್ಪಟ್ಟ ವಿಧ್ಯಾರ್ಥಿ ಗುರುತಿನ ಕಾರ್ಡನ್ನು ಪಡೆದ ಮೇಲೆ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಸದಸ್ಯರಾಗಬಹುದು.
- ಸದಸ್ಯತ್ವವನ್ನು ಪಡೆಯಬೇಕಾದರೆ ಸದಸ್ಯತ್ವ ಅರ್ಜಿಯನ್ನು ಭರ್ತಿಮಾಡಿ ಅದರ ಜೊತೆಯಲ್ಲಿ ವಿದ್ಯಾರ್ಥಿಗಳು 2 ಪಾಸ್‌ಪೋರ್ಟ್ ಹಾಗೂ 1 ಸ್ಟ್ಯಾಂಪ್ ಸೈಜ್, ಅಳತೆಯ ಒಟ್ಟು ಮೂರುಭಾವಚಿತ್ರಗಳನ್ನು ಗ್ರಂಥಾಲಯ ಕಛೇರಿಯಲ್ಲಿ ಸಲ್ಲಿಸಬೇಕು.
- ಪಿ.ಎಚ್‌ಡಿ ಸಂಶೋಧನಾ ವಿದ್ಯಾರ್ಥಿಗಳು ರೂ. 500/- ಗಳನ್ನು ಹಿಂಪಾವತಿಸುವ ಭದ್ರತಾ ಠೇವಣಿಯಾಗಿ ಪಾವತಿಸಿದ ಮೇಲೆ ಗ್ರಂಥಾಲಯದ ಎರವಲು ಕಾರ್ಡುಗಳನ್ನು ನೀಡಲಾಗುವುದು.
- ಒಂದು ಕಾರ್ಡಿಗೆ ಒಂದು ಗ್ರಂಥವನ್ನು ಪಡೆಯಬಹುದಾಗಿದೆ. ಪಡೆದ ಗ್ರಂಥವನ್ನು 60 ದಿನಗಳವರೆವಿಗೂ ಬಳಸಿಕೊಳ್ಳಬಹುದಾಗಿದೆ.
- 60 ದಿನಗಳ ನಂತರ ಗ್ರಂಥಾಲಯಕ್ಕೆ ಹಿಂದಿರುಗಿಸದಿದ್ದಲ್ಲಿ ಒಂದು ದಿನಕ್ಕೆ ಒಂದು ಗ್ರಂಥಕ್ಕೆ ಒಂದು ರೂ.ನಂತೆ ದಂಡ ಶುಲ್ಕ ನೀಡಬೇಕಾಗುತ್ತದೆ.
- ವಿಶ್ವವಿದ್ಯಾನಿಲಯದ ನಿಬಂಧನೆಗಳ ಪ್ರಕಾರ ವಿದ್ಯಾರ್ಥಿಗಳು ಗ್ರಂಥಾಲಯ ಬೇಬಾಕಿ ಪತ್ರವನ್ನು ಪಡೆಯಬೇಕಾದಲ್ಲಿ ಅವಶ್ಯವಾಗಿ ಗುರುತಿನ ಕಾರ್ಡನ್ನು ತೋರಿಸಿ, ಎರವಲು ಕಾರ್ಡುಗಳನ್ನು ಪಡೆದಿದ್ದಲ್ಲಿ ಅವುಗಳನ್ನು ಕಡ್ಡಾಯವಾಗಿ ಹಿಂದಿರುಗಿಸಬೇಕು.

**ಗ್ರಂಥಾಲಯ ಸೇವೆ:**

- ಗ್ರಂಥಾಲಯದಲ್ಲಿ ಓದುಗರಿಗೆ, ರೆಫರೆನ್ಸ್ ಮತ್ತು ರೆಫರಲ್ ಸೇವೆಗಳು, ಪ್ರಸ್ತುತ ಜಾಗೃತಿ ಸೇವೆ, ಒಪ್ಯಾಕ್ ಸೇವೆ, ಓರಿಯಂಟೇಷನ್ ಸೇವೆ, ಬಿಬ್ಲಿಯೋಗ್ರಾಫಿಕ್ ಸೇವೆ, ನ್ಯೂಸ್ ಪೇಪರ್ ಕ್ಲಿಪ್ಪಿಂಗ್ಸ್ ಸೇವೆ, ಛಾಯಾಪ್ರತಿ ಸೇವೆ, ಇತ್ಯಾದಿ ಸೇವೆಗಳನ್ನು ಕ.ರಾ.ಮು.ವಿ ಗ್ರಂಥಾಲಯವು ಒದಗಿಸುತ್ತಿದೆ.
- ಗ್ರಂಥಾಲಯವು ಹೊಸದಾಗಿ ಖರೀದಿಸಿರುವ ಪುಸ್ತಕಗಳನ್ನು ಮತ್ತು ನಿಯತಕಾಲಿಕೆಗಳನ್ನು ತಿಂಗಳವರೆಗೆ ಓದುಗರ ಉಪಯೋಗಕ್ಕೆ ಪ್ರದರ್ಶಿಸುತ್ತದೆ.
- ಇತರೆ ಸಂಪನ್ಮೂಲಗಳಾದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಗತ್ಯತೆಗಳ ಪೂರೈಕೆಗೆ ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹೊಂದಿದೆ.
- ಗ್ರಂಥಾಲಯದ ಸೇವೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯಲು ವಿಶ್ವವಿದ್ಯಾನಿಲಯದ ಅಂತರ್‌ಜಾಲವನ್ನು ವೀಕ್ಷಿಸಬಹುದು.
- ವೆಬ್ ಆಧಾರಿತ ಆನ್‌ಲೈನ್ ಪಬ್ಲಿಕ್ ಆಕ್ಸಸ್ ಕ್ಯಾಟಲಾಗ್ ಓದುಗರಿಗೆ ಒದಗಿಸಲಾಗುತ್ತಿದೆ.
- ಗ್ರಂಥಾಲಯದ ವೆಬ್‌ಸೈಟ್ ನಲ್ಲಿ ಇ-ಪತ್ರಿಕೆಗಳು, ಇ-ಪುಸ್ತಕಗಳು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಇತ್ಯಾದಿ ಮತ್ತು ಗ್ರಂಥಾಲಯವು ಆನ್‌ಲೈನ್ ಪಬ್ಲಿಕ ಆಕ್ಸಸ್ ಕ್ಯಾಟಲಾಗ್ ಲಿಂಕ್ ನಿಲುಕಿಸಿ ಕೊಳ್ಳಲು [http://ksoumysore.edu.in/library.html]ಸಂಪರ್ಕ ಕೊಂಡಿಯನ್ನು ಏರ್ಪಡಿಸಿದೆ.
- ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಗ್ರಂಥಾಲಯವು ಕಾರ್ಯನಿರ್ವಹಿಸುತ್ತದೆ.

- ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ಸಂಪರ್ಕ ಕಾರ್ಯಕ್ರಮಗಳು, ಹಾಗೂ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಹಾಗೂ ಸಾರ್ವಜನಿಕ ಸರ್ಕಾರಿ ರಜಾ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ.

ಗ್ರಂಥಾಲಯದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳನ್ನು ಹಾಗೂ ಅನಿಸಿಕೆಗಳನ್ನುksoulibrary@gmail.com. ಇ–ಮೇಲ್ ಐ.ಡಿ ಗೆ ಕಳುಹಿಸಬಹುದು ಹಾಗೂ ದೂರವಾಣಿ ಸಂಖ್ಯೆ: 0821–2519943 ಆಂತರಿಕ ಸಂಪರ್ಕ 525 / 526 ಅನ್ನು ಸಂಪರ್ಕಿಸಬಹುದು.

**ಆರೋಗ್ಯ ಕೇಂದ್ರ :**

ವಿದ್ಯಾರ್ಥಿಗಳು ವಿವಿ ಆವರಣದಲ್ಲಿ ತಂಗಿರುವಾಗ ಅವರ ತುರ್ತು ಮತ್ತು ತಕ್ಷಣದ ವೈದ್ಯಕೀಯ ಅಗತ್ಯಗಳಿಗೆ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದೆ. ಕೇವಲ ಹೊರ ರೋಗಿ ವಿಭಾಗ (OPD) ಸೌಲಭ್ಯವಿದ್ದು, ವೈದ್ಯರು ಮತ್ತು ಇತರ ಸಿಬ್ಬಂದಿಗಳು ಕರ್ತವ್ಯದಲ್ಲಿ ನಿರತರಿರುತ್ತಾರೆ.

**ವಿದ್ಯಾರ್ಥಿ ನಿಲಯ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿನಿಲಯವನ್ನು ಕಲ್ಪಿಸಿದೆ.

**ಪುರುಷ ವಿದ್ಯಾರ್ಥಿ ವಸತಿ ನಿಲಯ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯದಲ್ಲಿ ಒಟ್ಟು 33 ಕೊಠಡಿಗಳಿವೆ. ಪ್ರತಿ ಕೊಠಡಿಯಲ್ಲಿ ಐದು ವಿದ್ಯಾರ್ಥಿಗಳು ಉಳಿದುಕೊಳ್ಳಬಹುದು. ಆದುದರಿಂದ ಈ ಸೌಲಭ್ಯವು ಒಮ್ಮೆಗೆ 165 ವಿದ್ಯಾರ್ಥಿಗಳಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಬಯಸುವ ವಿದ್ಯಾರ್ಥಿಗಳು ದಿನವೊಂದಕ್ಕೆ ರೂ.70/– ಗಳನ್ನು ಪಾವತಿಸಬೇಕಾಗುತ್ತದೆ.

**ಮಹಿಳಾ ವಿದ್ಯಾರ್ಥಿ ವಸತಿ ನಿಲಯ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಯರ ವಸತಿಗಾಗಿ 09 ಕುಟೀರಗಳಿವೆ. ಪ್ರತಿ ಕುಟೀರದಲ್ಲಿ 12 ಮಂದಿ ವಿದ್ಯಾರ್ಥಿನಿಯರು ಉಳಿದುಕೊಳ್ಳಬಹುದಾದುದರಿಂದ ಈ ಸೌಲಭ್ಯವು ಒಮ್ಮೆಗೆ 108 ವಿದ್ಯಾರ್ಥಿನಿಯರಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಲು ಅಪೇಕ್ಷಿಸುವ ವಿದ್ಯಾರ್ಥಿನಿಯರು ದಿನವೊಂದಕ್ಕೆ ರೂ.70/– ಗಳನ್ನು ಪಾವತಿಸಬೇಕಾಗುತ್ತದೆ. ಕರಾಮುವಿಯು ತನ್ನ ಪರಿಮಿತಿಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾಡಿಕೊಡುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀತಿ ಆಧರಿಸಿ ವಸತಿ ಸೌಲಭ್ಯವನ್ನು ನೀಡಲಾಗುವುದು. ವಸತಿ ಸೌಲಭ್ಯ ದೊರೆಯದೆ ಇರುವವರು ವಸತಿಗಾಗಿ ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಕೊಠಡಿಯಲ್ಲಿರುವಾಗ ವಿಶ್ವವಿದ್ಯಾನಿಲಯದ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟು ಮಾಡುವ ನಿಲಯಾರ್ಥಿಗಳನ್ನು ಶಿಸ್ತುಕ್ರಮಕ್ಕೊಳಪಡಿಸಿ ದಂಡನೆಗೆ ಗುರಿಪಡಿಸಲಾಗುವುದು. ವಸತಿ ಸೌಲಭ್ಯಕ್ಕೆ ಮತ್ತು ವಸತಿ ಶುಲ್ಕ ಪಾವತಿಗಾಗಿ ಕಚೇರಿ ವೇಳೆಯಲ್ಲಿ ಕರಾಮುವಿಯ ಅತಿಥಿ ಗೃಹದ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ – 9880072854.

**ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ:**

ಕರಾಮುವಿಯ ಸ್ಪರ್ಧಾತ್ಮಕ ತರಬೇತಿ ಕೇಂದ್ರವು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 0821–2515944.

## 11. ಘಟಿಕೋತ್ಸವ :

(ಘಟಿಕೋತ್ಸವ / ಪದವಿ ಪ್ರಮಾಣ ಪತ್ರಗಳ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ನೋಡಿ) ಘಟಿಕೋತ್ಸವವನ್ನು ಸಂಬಂಧಿತ ಶಿಕ್ಷಣ ಕ್ರಮಗಳ ಫಲಿತಾಂಶವು ಘೋಷಣೆಯಾದ ನಂತರ ವಿಶ್ವವಿದ್ಯಾನಿಲಯವು ನಡೆಸುತ್ತದೆ. ಇದರ ಬಗ್ಗೆ ಪ್ರತ್ಯೇಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನಿಗದಿತ ಸಮಯದೊಳಗೆ ಕಳಿಸಲಾಗುತ್ತದೆ.

## 12. ಗುಣಾತ್ಮಕ ಉಪಕ್ರಮಗಳು

ವಿದ್ಯಾರ್ಥಿಗಳಿಗೆ ಗುಣಮಟ್ಟದ ಸೇವೆಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಹಲವಾರು ಕ್ರಮಗಳನ್ನು ಕೈಗೊಂಡಿದೆ.ಆಂತರಿಕ ಗುಣಮಟ್ಟ ಭರವಸೆ ಕೇಂದ್ರವನ್ನು ಯು.ಜಿ.ಸಿ.ಆದೇಶದ ಅನುಸಾರ ರಚನೆ ಮಾಡಲಾಗಿದೆ.

**ಆಂತರಿಕ ಗುಣಮಟ್ಟ ಭರವಸೆ ಕೇಂದ್ರ (ಸಿ.ಐ.ಕ್ಯೂ.ಎ.)**

ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ಪ್ರತಿಯೊಂದು ಹಂತದಲ್ಲೂ ಗುಣಮಟ್ಟ ಸೇವೆಯನ್ನು ಒದಗಿಸಲು ಅಗತ್ಯ ಹಾಗೂ ಹಲವಾರು ಕ್ರಮಗಳನ್ನು ನೀಡುವ ಸಲುವಾಗಿ ಸಹಕರಿಸುವ ಸಂಸ್ಥೆಗಳೊಂದಿಗೆ ಅನ್ಯೋನ್ಯ ಸಂಬಂಧವನ್ನು/ಪರಸ್ಪರ ಕಾರ್ಯಚಟುವಟಿಕೆಯನ್ನು ಮಾಡುತ್ತಿದೆ. ಅಂದರೆ ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ವಿದ್ಯಾರ್ಥಿ ಪ್ರವೇಶ ಪಡೆದ ದಿನದಿಂದ ಪ್ರಾರಂಭಿಸಿ ತನ್ನ ಶೈಕ್ಷಣಿಕ ಗುರಿಗಳನ್ನು ಪೂರೈಸಿಕೊಳ್ಳುವ ಅವಧಿಯವರೆವಿಗೂ ಸಹಕಾರ ಒದಗಿಸುತ್ತದೆ.

## 13. ಮಾಹಿತಿ ಮತ್ತು ಮಾರ್ಗದರ್ಶನ ಘಟಕ

ಮಾಹಿತಿ ಮತ್ತು ಮಾಗದರ್ಶನ ಘಟಕವು ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತದೆ. ಅಂದರೆ ವಿಶ್ವವಿದ್ಯಾನಿಲಯವು ಒದಗಿಸುತ್ತಿರುವ ಶಿಕ್ಷಣಕ್ರಮಗಳು, ಪ್ರವೇಶಾತಿ, ಅಧ್ಯಯನ ಸಾಮಗ್ರಿಗಳು, ಸಂಪರ್ಕ ಕಾರ್ಯಕ್ರಮ, ಸಮಾಲೋಚನಾ ಕಾರ್ಯಕ್ರಮ, ಪರೀಕ್ಷೆಗಳು, ಪರೀಕ್ಷಾ ಫಲಿತಾಂಶ, ಅಂಕಪಟ್ಟಿಗಳು, ಅರ್ಹತಾ ಪತ್ರಗಳು, ವಿದ್ಯಾರ್ಥಿನಿಲಯದ ಸೌಲಭ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ.

ಮಾಹಿತಿ ಮತ್ತು ಮಾರ್ಗದರ್ಶನ ಘಟಕದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ವೈಯಕ್ತಿಕವಾಗಿ ಈ ಘಟಕಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು.ಅಲ್ಲದೆ ದೂರವಾಣಿ ಮುಖಾಂತರವಾಗಿಯೂ ಘಟಕವನ್ನು ಸಂಪರ್ಕಿಸಬಹುದು.ಈ ಘಟಕದ ದೂರವಾಣಿ ಸಂಖ್ಯೆಗಳು 9845363573 ಮತ್ತು 9449489749, ಈ ಘಟಕವು ಕಛೇರಿಯ ಪ್ರವೇಶಾತಿ ವಿಭಾಗದ ಮುಖ್ಯದ್ವಾರದಲ್ಲಿದೆ.

**ಮಾರ್ಗದರ್ಶನ ಮತ್ತು ಸಮಾಲೋಚನೆ**

ವಿದ್ಯಾರ್ಥಿ ಜೀವನವು ಸಂಕೀರ್ಣ ಹಾಗೂ ಸೂಕ್ಷ್ಮತೆಯುಳ್ಳದ್ದಾಗಿದೆ. ವಿದ್ಯಾರ್ಥಿಗಳು 21 ನೆಯ ಶತಮಾನದಲ್ಲಿ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ ಹಾಗೂ ಸಂಧಿಗ್ದ ಪರಿಸ್ಥಿತಿಯಲ್ಲಿದ್ದಾರೆ.ಇದರಿಂದಾಗಿ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮತ್ತು ಸಮಾಲೋಚನೆಯ ಅಗತ್ಯತೆ ಇದೆ. ಕೌಶಲ ಅಭಿವೃದ್ಧಿ, ವೃತ್ತಿ ತಿಳುವಳಿಕೆ, ಜೀವನ ಕೌಶಲಗಳು, ಸ್ಥಾನ ನಿಯುಕ್ತಿಕರಣ (ಉದ್ಯೋಗ ಪಡೆಯುವಿಕೆ)ಉನ್ನತ ಶಿಕ್ಷಣದ ಅವಕಾಶ ಹಾಗೂ ಇನ್ನಿತರ ಅಂಶಗಳಿಗೆ ಮಾರ್ಗದರ್ಶನ ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯವು ಸುಸಜ್ಜಿತವಾದ ಮಾರ್ಗದರ್ಶನ ಮತ್ತು ಸಮಾಲೋಚನಾ ಕೇಂದ್ರವನ್ನು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸ್ಥಾಪಿಸಿದೆ ಮತ್ತು ಅನ್ಯೋನ್ಯ ಕ್ರಿಯಾ ವೇದಿಕೆಯನ್ನು ಆರಂಭಿಸಲಾಗುತ್ತಿದೆ.

**ಅನ್ಯೋನ್ಯ (Interactive) ಕ್ರಿಯಾ ವೇದಿಕೆ**

ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಮಾಹಿತಿ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ದೊರೆತಿರುವ ಲಾಭಗಳನ್ನು ಬಳಸಿಕೊಳ್ಳಲು ವಿಶ್ವವಿದ್ಯಾನಿಲಯವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅನ್ಯೋನ್ಯ ಕ್ರಿಯಾ ವೇದಿಕೆ, ವರ್ಚ್ಯುಯಲ್ ತರಗತಿ ಕೊಠಡಿ, ತಜ್ಞರಿಂದ ಉಪನ್ಯಾಸಗಳನ್ನು ನೀಡುವುದು, ಡಿಜಿಟಲ್ ಗ್ರಂಥಾಲಯ ಸೇವೆಗಳು ಮತ್ತು ಇನ್ನಿತರ ಬೆಂಬಲ ಸೇವೆಗಳನ್ನು ಮುಂದಿನ ದಿನಗಳಲ್ಲಿ ಸೃಜಿಸಲಾಗುವುದು.

## 14. ಕುಂದುಕೊರತೆ ನಿವಾರಣಾ ಘಟಕ

ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಸಮಯಕ್ಕೆ ಅಗತ್ಯವಾದ ಸೇವೆಗಳನ್ನು ಒದಗಿಸುವುದು ಅತ್ಯಗತ್ಯವಾಗಿದೆ. ಕ.ರಾ.ಮು.ವಿ. ಇದಕ್ಕಾಗಿ ಕುಂದುಕೊರತೆ ನಿವಾರಣಾ ಘಟಕವನ್ನು ಆರಂಭಿಸಿ ಸಂಯೋಜನಾಧಿಕಾರಿಗಳನ್ನು ನೇಮಿಸಿದೆ. ಈ ಘಟಕವು ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯನಿರ್ವಹಿಸುತ್ತದೆ. ಅಂದರೆ, ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳು, ವಿದ್ಯಾರ್ಥಿಗಳ ಬೆಂಬಲ ಸೇವೆಗಳು ಮತ್ತು ಪರೀಕ್ಷೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೇಂದ್ರಿಕರಿಸಿ, ಪರಿಹರಿಸುತ್ತದೆ.

ಈ ಘಟಕದಲ್ಲಿ ಕಾರ್ಯನಿರ್ವಹಿಸುವ ಸಂಯೋಜನಾಧಿಕಾರಿಗಳು ಮತ್ತು ದೂರವಾಣಿ ಸಂಖ್ಯೆ.ಮುಂದಿನಂತಿದೆ.

ಶ್ರೀ ಮಹೇಶ್, ಡಿ.ಎಂ. ಮೊಬೈಲ್. 9901249102 ಮತ್ತು ಡಾ. ಎ.ವೈ. ವಿಜಯಕುಮಾರ್ ಮೊಬೈಲ್. 9845363573

ಈ ಘಟಕದ ಸಂಯೋಜನಾಧಿಕಾರಿಗಳು ವಿದ್ಯಾರ್ಥಿಗಳ ಕುಂದು–ಕೊರತೆಗಳನ್ನು ಪರೀಕ್ಷಿಸಿ, ಅವಲೋಕಿಸಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸುವರು.

ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕೆ.ಎಸ್.ಒ.ಯು ಜಾಲತಾಣಕ್ಕೆ ಹೋಗಿ ತಮ್ಮ ಸಮಸ್ಯೆಗಳನ್ನು ದಾಖಲಿಸಬಹುದು.

**website.http://ksoumysore.karnataka.gov.in/kannada/pages/Student_Grievance_Reprisal_Cell.aspx**

ಆನ್‌ಲೈನ್‌ನಲ್ಲಿಯೂ ಕೂಡ ವಿದ್ಯಾರ್ಥಿಗಳು ಯು.ಜಿ.ಸಿ ಪೋರ್ಟಲ್‌ಗೆ ತಮ್ಮ ಕುಂದು–ಕೊರತೆಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು. ಈ ವ್ಯವಸ್ಥೆಯ ನೊಡೆಲ್ ಅಧಿಕಾರಿಯ ಹೆಸರು ಮತ್ತು ವಿಳಾಸ :

**ಡಾ. ಜೆ.ಎಸ್. ಚಂದ್ರಶೇಖರ್**

ನೊಡೆಲ್ ಅಧಿಕಾರಿ, ಯು.ಜಿ.ಸಿ. ಕುಂದು–ಕೊರತೆ ಘಟಕ ಕ.ರಾ.ಮು.ವಿ. ಮೈಸೂರು

**ಮೊಬೈಲ್.** 81972–42133

****

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570 006

**ಪಿಹೆಚ್.ಡಿ ಕಾರ್ಯಕ್ರಮಕ್ಕೆ ಅರ್ಜಿ (ನಮೂನೆ – ಬಿ)**

ವಿಷಯ: ___________________________ ☐ ಪೂರ್ಣ ಅವಧಿ ☐ ಪಾರ್ಟ್ ಟೈಮ್

| | | |
|---|---|---|
| 1 | ಹೆಸರು | |
| 2 | ನೋಂದಣಿ ಸಂಖ್ಯೆ | |
| 3 | ಸಂಶೋಧನಾ ವಿಷಯ | |
| 4 | ಮಾರ್ಗದರ್ಶಕರ ಹೆಸರು | |
| 5 | ಸಹ ಮಾರ್ಗದರ್ಶಕರ ಹೆಸರು | |
| 6 | ಶುಲ್ಕ ವಿವರ | |
| 7 | ತಾತ್ಕಾಲಿಕ ನೋಂದಣಿ ಸಂಖ್ಯೆ(ಕಚೇರಿಯಿಂದ ನೀಡಲಾಗುವುದು) | |

- ಈ ಶುಲ್ಕವು ಕೋರ್ಸ್ ವರ್ಕ್ ಶುಲ್ಕ, ತಾತ್ಕಾಲಿಕ ನೋಂದಣಿ ಶುಲ್ಕ, ಗ್ರಂಥಾಲಯ ಶುಲ್ಕ ಮತ್ತು ವಿಜ್ಞಾನದ ವಿದ್ಯಾರ್ಥಿಗಳಗೆ ಲ್ಯಾಬ್ ಶುಲ್ಕ ಒಳಗೊಂಡಿರುತ್ತದೆ.

ಘೋಷಣೆ

ನಾನು ಪಿಹೆಚ್.ಡಿ ಕಾರ್ಯಕ್ರಮಕ್ಕೆ ತಾತ್ಕಾಲಿಕವಾಗಿ ನೋಂದಣಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ. ಮೇಲ್ಕಂಡ ಎಲ್ಲಾ ಮಾಹಿತಿಗಳ ನನಗೆ ತಿಳಿದ ಮಟ್ಟಿಗೆ ಸತ್ಯ ಎಂದು ಈ ಮೂಲಕ ದೃಢೀಕರಿಸುತ್ತದ್ದೇನೆ. ನಾನು ಸಲ್ಲಿಸುತ್ತಿರುವ ಸಿನಾಪ್ಸಿಸ್ ನಾನೇ ಸಿದ್ಧಪಡಿಸಿರುವುದು, ನಕಲಿಯಲ್ಲ

ದಿನಾಂಕ:

ಸ್ಥಳ:

ಅಭ್ಯರ್ಥಿಯ ಸಹಿ

**ಮಾರ್ಗದರ್ಶಕರ ಪ್ರಮಾಣ ಪತ್ರ**

ನಾನು ______________________ ಎಂಬ ಹೆಸರಿನ ವಿದ್ಯಾರ್ಥಿಯನ್ನು ಪಿಹೆಚ್.ಡಿ ಕಾರ್ಯಕ್ಕಕ್ಕೆ ಮಾರ್ಗದರ್ಶನ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತೇನೆ. ಈ ಪ್ರಸ್ತಾವನೆಯನ್ನು ನನ್ನ ಮಾರ್ಗದರ್ಶನದಲ್ಲಿ ತಯಾರಿಸಲಾಗಿದೆ. ಇದು ನಕಲು ಅಲ್ಲ ಹಾಗೂ ಬೇರೆಲ್ಲೂ ಪ್ರಕಟಿತವಾಗಿಲ್ಲ.

ಈ ಅರ್ಜಿಯನ್ನು ____________ ವಿಭಾಗದ ಮುಖ್ಯಸ್ಥರಿಗೆ ಕಳುಹಿಸುತ್ತದ್ದೇನೆ

ಮಾರ್ಗದರ್ಶಕರು

**ಸಂಶೋಧನಾ ಸಲಹಾ ಸಮಿತಿಗೆ ವಿಭಾಗದ ಮುಖ್ಯಸ್ಥರಿಂದ ಕಳುಹಿಸಲು**

ಈ ಅರ್ಜಿಯನ್ನು ಮುಖ್ಯಸ್ಥರು, ಸಂಶೋಧನಾ ಸಲಹಾ ಸಮಿತಿ ಇವರಿಗೆ ನೋಂದಣಿ ಪೂರ್ವ ಕೊಲೋಕಿಯಂ ನೆಡಸಲು ಸಲ್ಲಿಸುತ್ತಿದ್ದೇನೆ

**ವಿಭಾಗದ ಮುಖ್ಯಸ್ಥರ ಸಹಿ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570 006

**ಪಿಹೆಚ್.ಡಿ ಕಾರ್ಯಕ್ರಮಕ್ಕೆ ಅರ್ಜಿ (ನಮೂನೆ –ಸಿ)**

ವಿಷಯ: ___________________________ ☐ ಪೂರ್ಣ ಅವಧಿ ☐ ಪಾರ್ಟ್ ಟೈಮ್

| | | |
|---|---|---|
| 1 | ಹೆಸರು | |
| 2 | ತಾತ್ಕಾಲಿಕ ನೋಂದಣಿ ಸಂಖ್ಯೆ | |
| 3 | ಕೋರ್ಸ್ ವರ್ಕ್ ಫಲಿತಾಂಶ | |
| 4 | ಮಾರ್ಗದರ್ಶಕರ ಹೆಸರು | |
| 5 | ಸಹ ಮಾರ್ಗದರ್ಶಕರ ಹೆಸರು | |
| 6 | ಶುಲ್ಕ ವಿವರ | |
| 7 | ನೋಂದಣಿ ಸಂಖ್ಯೆ (ಕಚೇರಿಯಿಂದ ನೀಡಲಾಗುವುದು) | |
| 7 | Registration Number<br>(To be entered by the office) | |

- ಈ ಶುಲ್ಕವು ನೋಂದಣಿ ಶುಲ್ಕ, ಬೋಧನಾ ಶುಲ್ಕ ಒಳಗೊಂಡಿರುತ್ತದೆ.

ದಿನಾಂಕ:

ಸ್ಥಳ:

ಅಭ್ಯರ್ಥಿಯ ಸಹಿ

**ಸಂಶೋಧನಾ ಸಲಹಾ ಸಮಿತಿಗೆ ವಿಭಾಗದ ಮುಖ್ಯಸ್ಥರಿಂದ ಕಳುಹಿಸಲು**

ಈ ಅರ್ಜಿಯನ್ನು ಮುಖ್ಯಸ್ಥರು, ಸಂಶೋಧನಾ ಸಲಹಾ ಸಮಿತಿ ಇವರಿಗೆ ನೋಂದಣಿ ಮಾಡಲು ಸಲ್ಲಿಸುತ್ತಿದ್ದೇನೆ _________________ ಹೆಸರಿನ ವಿದ್ಯಾರ್ಥಿಯು ಕೋರ್ಸ್ ವರ್ಕ್ ಅನ್ನು ಶೇ ________ ಪಡೆದು ಯಶಸ್ವಿಯಾಗಿ ಮುಗಿಸಿದ್ದಾರೆ.

**ವಿಭಾಗದ ಮುಖ್ಯಸ್ಥರ ಸಹಿ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570 006

**ಪ್ರಗತಿ ವರದಿ**

**_________________________ ಅವಧಿಯಿಂದ ________________ ಅವಧಿಯವರೆಗೆ ಪ್ರಗತಿ ವರದಿಯ ಸಂಖ್ಯೆ ____**

ವಿಷಯ: ___________________________ ☐ ಪೂರ್ಣ ಅವಧಿ ☐ ಪಾರ್ಟ್ ಟೈಮ್

| | | |
|---|---|---|
| 1 | ಹೆಸರು | |
| 2 | ನೋಂದಣಿ ಸಂಖ್ಯೆ | |
| 3 | ಮಾರ್ಗದರ್ಶಕರ ಹೆಸರು | |
| 4 | ಸಹ ಮಾರ್ಗದರ್ಶಕರ ಹೆಸರು | |
| 5 | ಶುಲ್ಕ ವಿವರ | |
| 6 | ಸಂಶೋಧನಾ ಶೀರ್ಷಿಕೆ | |
| 7 | ಸಂಶೋಧನೆಯ ಪ್ರಗತಿ | |
| 8 | ವಿಭಾಗದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ | |
| 9 | ಸೆಮಿನಾರ್/ಸಮ್ಮೇಳನದಲ್ಲಿ ಭಾಗವಹಿಸುವಿಕೆ (ಪ್ರಮಾಣ ಪತ್ರ ಸಲ್ಲಿಸಿ) | |
| 10 | ಸೆಮಿನಾರ್/ಸಮ್ಮೇಳನದಲ್ಲಿ ಪತ್ರಿಕ ಮಂಡನೆ (ಪ್ರಮಾಣ ಪತ್ರ ಸಲ್ಲಿಸಿ) | |
| 11 | ಈ ಅವಧಿಯಲ್ಲಿ ಮಾಡಿರುವ ಪ್ರಕಟಣೆ<br>i. ಸಾಮಾನ್ಯ<br>ii. ಸಂಶೋಧನೆಗೆ ಸಂಬಂಧಿಸಿದಂತೆ | |
| 12 | ಪರಾಮರ್ಶಿಸಿದ ಪುಸ್ತಕ, ಸಂಶೋಧನಾ ಪತ್ರಿಕೆಗಳು | |
| 13 | ಇತರೆ ಮಾಹಿತಿ | |
| 14 | ಮಾರ್ಗದರ್ಶಕರ ಅಭಿಪ್ರಾಯ | |
| 15 | ಪ್ರಗತಿಯ ಮೌಲ್ಯಮಾಪನ | |
| 16 | ವಾರ್ಷಿಕ ಪ್ರಗತಿ ಪರೀಶೀಲನಾ ಸಭೆ ನಡೆದ ದಿನಾಂಕ | |
| 17 | ಸಂಶೋಧನಾ ಸಲಹಾ ಸಮಿತಿಯ ಅಭಿಪ್ರಾಯ | |

- ಈ ಶುಲ್ಕವು ನೋಂದಣಿ ಶುಲ್ಕ, ಬೋಧನಾ ಶುಲ್ಕ, ಗ್ರಂಥಾಲಯ ಶುಲ್ಕ ಮತ್ತು ವಿಜ್ಞಾನದ ವಿದ್ಯಾರ್ಥಿಗಳಗೆ ಲ್ಯಾಬ್ ಶುಲ್ಕ ಒಳಗೊಂಡಿರುತ್ತದೆ.

**ವಿದ್ಯಾರ್ಥಿಯ ಸಹಿ** **ಮಾರ್ಗದರ್ಶಕರ ಸಹಿ** **ವಿಭಾಗದ ಮುಖ್ಯಸ್ಥರ ಸಹಿ**

ದಿನಾಂಕ:

ಸ್ಥಳ: